[MR. SPEAKER in the Chair.]

Twenty-fourth Report of the Business Advisory Committee

Mr. SPEAKER.—I beg to present the Twenty-fourth Report of the Business Advisory Committee.

Sri D. MANJUNATH (Mr. Deputy Speaker).—I beg to move :

"That the House agrees with the Twenty-fourth report of the Business Adveisory Committee."

Mr. SPEAKER.—The question is :

"That the House agrees his Twenty-fourth Report of the Business Advisory Committee."

The motion was adopted.

Supplementay and Additional Demands for Grants for 1970–71 (First Instalment)

Presentation

Sri B. RACHAIAH (Minister for Agricultutre).—On behalf of the Minister for Finance, Planning and Youth Welfare I beg to present a statement showing the Schedule for Supplementary and Additional Demands for grants for the year 1970–71 (first instalment) as required under Article 205 (1) of the Constitution of India.

Mr. SPEAKER.—A statement showing the schedule for Supplementary and Additional Demands for Grants for the year 1970–71 (first instalment) as required under Article 205 (1) of the Constitution of India is presented.

City of Bangalore Municipal Corporation (Amendment) Bill, 1970

(i) Statutory Resolution to disapprove Ordinance No. 1970.

(ii) Motion to Consider the Bill

(*Debate Contd.*)

ಅಧ್ಯಕ್ಷರು.—ಈಗ ಶ್ರೀಮಾನ್ ದಯಾನಂದ ಸಾಗರ್‌ರವರು ಮಾತನಾಡುತ್ತಾರೆ.

†Sri R. DAYANANDA SAGAR.—Mr. Speaker Sir, the Corporation elections have not been held for a long time. Now the Hon. Minister brings in a Bill and says that he is going to conduct the Corporation elections. He must assure this House Sir, when exactly he is going to hold the

Corporation elections. Sir, for bad administration, according to them, they dismissed the Corporation. After dismissing the Corporation, the Government thought that they are going to bring better administration. It is not so, Sir. Now, in the Corporation, there is terrible corruption going on. My Hon. friends of this House, specially those belonging to the City of Bangalore, expressed yesterday how the corruption is rampant in the Corporation. No paper moves from one room to another unless the Officer concerned is bribed. Therefore, the administration after supersession has not improved but it has actually deteriorated. The Corporation administered by the Administrator and the Commissioner is looking after beautifying the City only in cartain areas. Big roads are widened still and ornamental lights have been put. Of course, we too appreciate them in one way. But what has happened to several interior parts and the rural parts included in the City? No attention whatsover has been paid to these parts of the City and these parts are going from bad to worse. The attitudes of the Officers are irresponsible and they concentrate their attention only to their areas where they are living. The Commissioner and the Administrator belong to a particular extension and this extension is improved and the rest of the areas have been ignored. For example my constituency consisting of Goripalya, Thimmenahalli, etc., have been completely neglected and no attention whatsoever has been paid to them. I can give you several instances like this if you could kindly come with me and go round the City. Several cross roads are full with heaps of dust and dustbins which have not been cleared for months. No Officer has ever visited these places and even if they have visited they have never cared to look into these things. This is how the administration is going on. Sir, during the time of the Corporators, every individual Corporator used to take intrest in these matters and carry out improvement activities and if these things were not done he used to impress upon the officers concerned to do it or he used to speak about these matters in the Corporation meetings. But today, excepting a few main roads, rest of the Corporation area has been ignored. The very fact that they want to put up a 13 storey building at a cost of about two to three crores of rupees shows that they have no interest in improving the lot of the common man.

4-30 P.M.

Then in regard to the Corporation grounds, I would like to mention Sir, that it has not taken care to safeguard its own interest. For instance, the Subhashnagar area which belongs to the Corporation, is being maintained by the Government.

Then Sir, I hope you remember that I spoke in this august House a few months ago, about the loot of five crores of rupees in one of the water supply schemes formulated by the water Supply Board. Sir the story is very interesting. Inspite of the warnings given to the Government both in this House and elsewhere, the Government was emboldened to give the tender to the highest tenderer which caused great

(SRI R. DAYANANDA SAGAR)

hardship to the people of Bangalore and in that over five crores of rupees were actually looted and in which the Cabinet is involved along with the other officers of the Water Supply Board. The Cabinet discussed the matter and took the decision to give the contract to a contractor who is having his registered office at Madras though his was the highest tender. Sir, the Chief Engineer told the Water Supply Board on 17th February 1969 that the lowest tender was of S. N. & Co. Still the contract was given to the highest tenderer.

Mr. SPEAKER.—The Hon. Member has exceeded his time limit. Moreover, the Hon. Member is referring to a matter which has no relevance to the present Bill which is before the House.

Sri K. H. SRINIVASA.—Sir, the matter to which the Hon. Member is referring has no relevance to the present Bill. I do not know how it is being allowed.

Mr. SPEAKER.—I know the Hon. Member is giving a very good information. But this has nothing to do with the present Bill. Therefore, the Hon. Member may please conclude his speech.

Sri R. DAYANANDA SAGAR.—Sir, if the Hon. Chair were to say that you would allow me to speak on this subject if I bring a motion, I will not refer to it now.

Mr. SPEAKER.—The Hon. Member may give notice of the motion and every motion will be considered on its own merits.

Sri R. DAYANANDA SAGAR.—Since the Hon. Chair has said that I will be given an opportunity to speak on this subject on some other occasion, I stop referring the said matter.

Then Sir, in this Bill it has been proposed that every plan has to go before the Planning Authority. This would cause a lot of inconvenience and hardship to the Citizens of Bangalore and it will only give scope for more and more corruption. Today you know Sir, if we want to get a plan sancnioned we have to pay or spend a lot of money to the Engineers and officers concerned and herefore if this further obstacle, *viz.*, the Planning Authority were to be brought into the picture, it would increase the difficulties of the citizens. Therefore, I request the Hon. Minister to withdraw some of these sections and I conclude with the hope that the Chair would give me another opportunity on some other occasion to speak on the matters relating to the Water supply Board.

With these words, I thank the Chair for giving me this opportunity to speak.

† ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ನಾನು ಈ ಕಾರ್ಪೊರೇಷನ್ ತಿದ್ದುಪಡಿ ಮಸೂದೆಯ ಬಗ್ಗೆ ಕೆಲವು ವಿಷಯಗಳನ್ನು ಮಾತನಾಡಬೇಕೆಂದಿದ್ದೇನೆ. ಆದರೆ ಈಗಾಗಲೆ ನನ್ನ ಕೆಲವು ಸ್ನೇಹಿತರು ಇದರ ಬಗ್ಗೆ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ನಾವು ಹಿಂದೆ ಅನೇಕ ಸಲ ಕಾರ್ಪೊರೇಷನ್ ಎಲೆಕ್ಷನ್‌ಗಳನ್ನು ನಡೆಸಬೇಕೆಂದು ಮಂತ್ರಿಗಳ ಬಳಿ ಅನೇಕ ನಿಯೋಗಗಳನ್ನು

ತೆಗೆದುಕೊಂಡು ಹೋಗಿದ್ದುದಾಯಿತು. ಇಲ್ಲ ಕೂಡ ಅನೇಕಾವರ್ತಿ ಉ ಚುನಾವಣೆಗಳನ್ನು ಬೇಗ ನಡೆಸಬೇಕೆಂದು ಬಹಳ ಒತ್ತಾಯ ಮಾಡಿರತಕ್ಕ ವಿಷಯ ಅಧ್ಯಕ್ಷರಾದ ತಮಗೂ ಗೊತ್ತಿದೆ. ಆದರೆ ಅವರು ಚುನಾವಣೆಗಳನ್ನು ನಡಸಬೇಕು ಅನ್ನುವಷ್ಟರಲ್ಲಿ ಕಾಂಗ್ರೆಸ್ ಒಡೆದು ಇಬ್ಬಾಗವಾಯಿತು.

ನಾನು ತಮಗೆ ಒಂದು ಮಾತನ್ನು ಹೇಳುತ್ತೇನೆ, ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕಂಥ ಸಂಧರ್ಭದಲ್ಲಿ ಕಾರ್ಪೊರೇಷನ್ ಚುನಾವಣೆಯ ದಿನಾಂಕವನ್ನು ಪ್ರಕಟಿಸದೇ ಇದ್ದರೆ ನಾವು ಬಹಳ ಉಗ್ರವಾಗಿ ಹೋರಾಟವನ್ನು ಮಾಡಬೇಕಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಮಾನ್ಯ ಮಂತ್ರಿಗಳು ಈಗ ನಗುತ್ತಾ ಇರುವುದನ್ನು ನೋಡಿದರೆ ಅವರು ಚುನಾವಣೆಯ ದಿನಾಂಕವನ್ನು ಪ್ರಕಟಿಸಬಹುದು ಎಂದು ನನಗೆ ಸಂತೋಷವಾಗುತ್ತದೆ. ಬೆಂಗಳೂರಿನ ಕಾರ್ಪೊರೇಷನ್ನಿನ ಗತಿ ಎಷ್ಟು ಅವಹೇಳನಕರವಾಗಿದೆ ಎನ್ನತಕ್ಕಂಥಾದ್ದು ತಮಗೆ ಗೊತ್ತಿದೆಯೋ ಇಲ್ಲವೋ. ಮೊದಲು ಲಂಚದ ಅಪಾದನೆ ಮಾಡುವುದಕ್ಕೆ ಮುನ್ನ ಕಾರ್ಪೊರೇಷನ್ನಿನ ಅಡಳಿತ ಎಷ್ಟು ಹದಗೆಟ್ಟಿದೆ ಎನ್ನುವುದಕ್ಕೆ ಒಂದೇ ಒಂದು ಸಣ್ಣ ನಿದರ್ಶನ ಕೊಡುತ್ತೇನೆ. ಇಡೀ ಸಾರ್ವಜನಿಕರಿಗೆ ಉಪಯೋಗವಾಗುವಂಥ ಕಾರ್ಪೊರೇಷನ್ನಿನ ಕಟ್ಟಡದಮೇಲೆ ಇರತಕ್ಕಂಥ ಒಂದು ದೊಡ್ಡ ಗೋಪುರದ ಗಡಿಯಾರ ಕೆಟ್ಟು 8 ತಿಂಗಳಾಯಿತು. ಅದು ಮುಳ್ಳು 3-15 ಕ್ಕೆ ಸರಿಯಾಗಿ ಬಂದು ನಿಂತಿದೆ. ಲಂಚವೂ ಮಧ್ಯಾಹ್ನ 3-15 ನಿಮಿಷಕ್ಕೆ ಸರಿಯಾಗಿ ಶುರುವಾಗಿದೆ. ಆ ಮುಳ್ಳನ್ನು ಸರಿಪಡಿಸಿದರೆ ಲಂಚವನ್ನೂ ನಿಲ್ಲಿಸಬೇಕಾಗುವುದು. ಕಾರ್ಪೊರೇಷನ್ನಿನಲ್ಲಿ ಒಂದೊಂದು ಸಣ್ಣ ಕೆಲಸಕ್ಕೂ ಲಂಚ ಕೊಡಬೇಕಾಗುತ್ತದೆ. ಇಲ್ಲದೇಹೋದರೆ ತಿಂಗಳುಗಟ್ಟಲೆಯಾದರೂ ವರ್ಷಗಟ್ಟಲೆಯಾದರೂ ಕೆಲಸ ಆಗುವುದಿಲ್ಲ. ಒಂದು ಪ್ಲಾನ್ ಕೊಟ್ಟರೆ 2 ತಿಂಗಳೊಳಗೆ ಕೊಡಬೇಕು ಎನ್ನುವ ನಿಯಮ ಇದೆ. ಸುಮಾರು 2-3 ವರ್ಷವಾದರೂ ಆ ಪ್ಲಾನನ್ನು ಹಿಂದಕ್ಕೆ ಕೊಡದೇ ಇರತಕ್ಕಂಥ ನಿದರ್ಶನಗಳು ಇವೆ. ಇದರ ಬಗ್ಗೆ ಒಂದು ಆಯೋಗ ಆಗಲಿ ಎಂದು ಹೇಳುತ್ತೇನೆ. ಬೆಂಗಳೂರಿನ ಜನತೆಯಿಂದ ಇಷ್ಟುವರೆಗೆ ಯಾವ ಒಂದು ತನಿಖೆಯನ್ನೂ ಮಾಡದೇ ಇರುವುದು ಬಹಳ ಶೋಚನೀಯ. ನಿಮ್ಮ ಮಾತನ್ನು ಆಲ್ಲರುವ ಅಧಿಕಾರಿಗಳು ಕೇಳುತ್ತಿದ್ದಾರೆಯೇ ಎನ್ನುವುದು ನನಗೆ ಶಂಕೆ ಬಂದಿದೆ. ಬೆಂಗಳೂರಿನ ಶಾಸಕರೂ ಹೋದರೂ ಕೂಡ ಅಲ್ಲಿಯ ಅಧಿಕಾರಿಗಳು ಲಘುವಾಗಿ ಮಾತನಾಡುತ್ತಾರೆ. ನ್ಯಾಯುವಾಗಿ ಸಾಮಾನ್ಯ ಜನತೆಗೆ ಬೇಕಾಗಿರತಕ್ಕಂಥ ಕೆಲಸಗಳು ಆಗಬೇಕಾದರೂ ಕಷ್ಟವಾಗುತ್ತದೆ ಎಂದು ನಾನು ಹೇಳುತ್ತೇನೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರಿನಲ್ಲಿ ವರ್ಷಗಟ್ಟಲೆಯಾದರೂ ಸಾರ್ವಜನಿಕ ನಲ್ಲಿಗಳು ರಿಪೇರಿ ಆಗುವುದಿಲ್ಲ. ನನ್ನ ಕ್ಷೇತ್ರಕ್ಕೆ ಬರುವುದಾದರೆ ನಾನು ನಾಳೆ ಬೆಳಗ್ಗೆಯೇ ಕರೆದುಕೊಂಡು ಹೋಗಿ ತೋರಿಸಿಕೊಡುತ್ತೇನೆ. ಒಂದು ವರ್ಷದಿಂದಲೂ ರಿಪೇರಿ ಆಗದೇ ಇರತಕ್ಕಂಥಾದ್ದು 30-32 ಸಾರ್ವಜನಿಕ ನಲ್ಲಿಗಳು ಇವೆ, ಅವು ಕೆಟ್ಟುಹೋಗಿವೆ. ನಾನು ಹೇಳುವುದು ಸುಳ್ಳು, ಸತ್ಯಕ್ಕೆ ದೂರವಾದುದು ಎಂದರೆ ನಾಳೆ ಬೆಳಗ್ಗೆಯೇ ರಾಜೀನಾಮೆ ಕೊಡುತ್ತೇನೆ ಎಂದು ಈ ಸಭೆಯಲ್ಲಿ ಹೇಳುತ್ತೇನೆ. ಈಗ ಸಾರ್ವಜನಿಕರ ನಲ್ಲಿಗಳನ್ನು ರಿಪೇರಿ ಮಾಡದೆ ಎಷ್ಟೋ ನಲ್ಲಿಗಳಲ್ಲಿ ನೀರು ಸೋರಿ ಹೋಗುತ್ತಾ ಇದೆ. ಈಗ ನೀರು ಸರಬರಾಜು ವ್ಯವಸ್ಥೆ ಕಾರ್ಪೊರೇಷನ್ ಮೂಲಕ ವಾಟರ್ ಬೋರ್ಡ್‌ನವರು ನಡೆಸುತ್ತಿದ್ದಾರೆ.

* * * *

ಈ ಟ್ರಸ್ಟ್‌ಬೋರ್ಡನ್ನು ನಿರ್ಮಾಣ ಮಾಡಿದ ಉದ್ದೇಶ ಏನೆಂದರೆ ಬೆಂಗಳೂರಿನಲ್ಲಿ ಯಾರಿಗೆ ಸಾಮಾನ್ಯ ಜನತೆಯಲ್ಲಿ ಸ್ಥೈಟು ಇಲ್ಲ ಅಂತಹವರಿಗೆ ಸ್ಥೈಟುಗಳನ್ನು ಒದಗಿಸಿ, ಬಡವರಿಗೆ ಅನುಕೂಲ ಮಾಡಿಕೊಡಬೇಕು ಎನ್ನುವುದು. ಇದರ ಬಗ್ಗೆ ನದಾಶಿವನಗರದ ಒಂದು ಉದಾಹರಣೆ ಕೊಡುತ್ತೇನೆ. ಅಲ್ಲಿ ತಮಗೆ ಸ್ಥೈಟು ಇಲ್ಲ ಎಂದು ಕಾಣುತ್ತದೆ; ಅಲ್ಲಿ ಸಂಪೂರ್ಣವಾಗಿ ಮಂತ್ರಿಗಳು, ಮಾಜಿ ಮಂತ್ರಿಗಳು, ದೊಡ್ಡ ದೊಡ್ಡ ಅಧಿಕಾರಿಗಳು, ಮುಂದೆ ಬರತಕ್ಕ ಮಂತ್ರಿಗಳು ಇವರುಗಳಿಗೆ ಇದೆ. ಈ ರೀತಿ ಟ್ರಸ್ಟ್‌ಬೋರ್ಡ್‌ನಲ್ಲಿರುವ ಅಕ್ರಮ, ಅವ್ಯವಹಾರಗಳನ್ನು ನೋಡಿದರೆ ಯಾರು ಯಾರು ದೊಡ್ಡ ದೊಡ್ಡ ಅಧಿಕಾರಿಗಳು ಇದ್ದಾರೋ ಅವರಿಗೆ ಕೊಡತಕ್ಕಂಥಾದ್ದು ಮತ್ತು ಹಣ ಕೊಡತಕ್ಕಂಥವರಿಗೆ ಕೊಡತಕ್ಕಂಥಾದ್ದು ಇದೆ.** ಸಾಮಾನ್ಯ ಜನತೆಗೆ, ಸಾವಿರಾರು ಜನಕ್ಕೆ. ಲಕ್ಷಾಂತರ ಜನಕ್ಕೆ 10 ವರ್ಷವಾಗಿದ್ದರೂ ಅವರು ಅರ್ಜಿಯನ್ನು ಹಾಕಿಕೊಂಡಿದ್ದರೂ ಅವರಿಗೆ ಸ್ಥೈಟು ಸಿಕ್ಕುತ್ತಾ ಇಲ್ಲ. ಈಗೊತ್ತು ಟ್ರಸ್ಟ್‌ಬೋರ್ಡ್ ಮೇಲೆ ಒಂದು ಎನ್‌ಕ್ವೈರಿ ಕಮೀಷನ್ ಮಾಡಿದರೆ 5 ವರ್ಷದಿಂದ 10 ವರ್ಷದಿಂದ ಸ್ಥೈಟು ಸಿಕ್ಕದೇ ಇರತಕ್ಕಂಥ ಬಡವರ ಅರ್ಜಿ ನಮಗೆ ಸಿಕ್ಕುತ್ತದೆ. ಎಂದು ನಾನು ಕಳಕಳಿಯಿಂದ ಹೇಳುತ್ತೇನೆ. ಈ ಅರ್ಜಿಗಳ ಬಗ್ಗೆ ನಿಮ್ಮ ಗಮನ ಇಲ್ಲ.**

****Matter not recorded as ordered by the Chair.

**Matter expunged as ordered by the Chair

(ಶ್ರೀ ಪಾಟೀಳ್ ನಾಗರಾಜ್)

ಸ್ವಾಮಿ, ನಾನು ನಗರಾಭಿವೃದ್ಧಿ ಮಂಡಳಿ ಅಧ್ಯಕ್ಷರ ಬಗ್ಗೆ ಯಾವ ಉದ್ದೇಶದಿಂದ ಆಪಾದನೆಗಳನ್ನು ಮಾಡಬೇಕಾಯಿತು ಎಂದರೆ, ಕಾರ್ಪೊರೇಷನ್ ಚುನಾವಣೆಗಳು ನಡೆದಿದ್ದರೆ, ನಾಲ್ಕು ಜನ ಕಾರ್ಪೊರೇಷನ್ ಸದಸ್ಯರು ಖೀಟಿಂಗಿಗೆ ಹೋಗುತ್ತಿದ್ದರು. ಆ ಉದ್ದೇಶದಿಂದ ಕಾರ್ಪೊರೇಷನ್ ಚುನಾವಣೆಗಳನ್ನು ನಡೆಸುವ ವಿಚಾರವಾಗಿ ಮಾತನಾಡುತ್ತಿದ್ದೆ. ನಗರಾಭಿವೃದ್ಧಿ ಮಂಡಳಿಯಲ್ಲಿ ಏನೇನು ನಡೆಯುತ್ತಿದೆ ಎನ್ನುವುದನ್ನೆಲ್ಲ ಕೂಲಂಕಷವಾಗಿ ವಿಚಾರಿಸಲು ಒಂದು ಎನ್‌ಕ್ವೈರಿ ಕಮಿಷನ್ ಕೂಡಲೇ ಸರ್ಕಾರ ನೇಮಕ ಮಾಡಬೇಕೆಂದು ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಅವರು ಮಾಡಿರುವುದರಲ್ಲಿ ನೂರಕ್ಕೆ 50-60 ಭಾಗ ಅಕ್ರಮ ಸಿಕ್ಕುತ್ತವೆ. ಅದನ್ನು ನಾನು ಹೇಳಿದರೆ, ಅಧ್ಯಕ್ಷರ ಮೇಲೆ ಆರೋಪ ಮಾಡುತ್ತಿದ್ದೇನೆಂದು ತಾವು ಹೇಳುತ್ತೀರಿ; ಕಾರ್ಪೊರೇಷನ್‌ನಲ್ಲಿ ಟ್ರಸ್ಟ್ ಬೋರ್ಡಿಗೆ ಒಂದು ಭಾಗವನ್ನು ವಹಿಸಿರುವುದರಿಂದ ಎರಡು ಕೈಕೆಸ್ತು ಕೊಂಡಂತಾಗಿದೆ ವಾರ್ಡ್ ಸಪ್ಲೈ ಬೋರ್ಡಿಗೆ ಸ್ವಲ್ಪ ಕೆಲಸವನ್ನು ಕೊಟ್ಟಿರುವುದರಿಂದ ಕಾಲು ಕಿತ್ತು ಕೊಂಡಂತಾಗಿದೆ. ಕಾರ್ಪೊರೇಷನ್‌ನಲ್ಲಿ ಇನ್ನು ಉಳಿದಿರುವ ಕೆಲಸವೆಂದರೆ ಕಸ ಗುಡಿಸತಕ್ಕ ಜಾಡಮಾಲಿಗಳ ಕೆಲಸ. ಅದಕ್ಕೆ ಒಬ್ಬ ಮಂತ್ರಿಗಳು, ಒಬ್ಬ ಅಡ್ಮಿನಿಸ್ಟ್ರೇಟರು, ಒಬ್ಬ ಕಮಿಷನರು, ದೊಡ್ಡ ಆಫೀಸು ಇದೆ. ಕಾರ್ಪೊರೇಷನ್ ಆಫೀಸಿನಲ್ಲಿ ಮೂರೂಕಾಲು ಗಂಟೆಯಲ್ಲ ಲಂಚ ಪುರುವಾಗುತ್ತದೆ. ಮಾನ್ಯ ಟಿ. ಆರ್. ಶಾಮಣ್ಣನವರೂ, ಶ್ರೀ ಕೆ. ಎಂ. ನಾಗಣ್ಣನವರೂ ಲಂಚ ತೆಗೆಯುತ್ತೇವೆಂದು ಹೊರಟಿದ್ದಾರೆ. ಅವರ ಕೈಯಲ್ಲಿ ಈ ಕೆಲಸ ಆಗುತ್ತದೆಯೋ ಇಲ್ಲವೋ ಎಂದು ನನಗೆ ಸಂಶಯ ಬರುತ್ತದೆ. ಚುನಾವಣೆಗಳನ್ನು ನಡೆಸಲು ಬಿಡಲಿ, ಅದು ಬೇರೆ ವಿಷಯ. ನಾವು ಒಂದು ಥಾಯಾ ಕಾರ್ಪೊರೇಷನ್ನೇ ಮಾಡಿಕೊಂಡಿದ್ದೇವೆ. ಯಾವತ್ತಾದರೂ ಒಂದು ದಿವಸ ಕಾರ್ಪೊರೇಷನ್ ಕಾರ್ಯವನ್ನು ಅಕ್ಸೆಪ್ಟ್ ಮಾಡಿಕೊಳ್ಳುತ್ತೇವೆ. ನಿಮ್ಮ ಪೋಲೀಸ್ ಅಥವಾ ಏನು ಸಿಬ್ಬಂದಿಯನ್ನು ತಂದರೂ ನಾವು ಆ ಕೆಲಸವನ್ನು ಬಿಡುವುದಿಲ್ಲ ಎಂದು ಬಹಳ ಗಂಭೀರವಾಗಿ ಘನತೆಯಿಂದ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಆದುದರಿಂದ ನಾನು ಕಳಕಳಿಯಿಂದ ಕೇಳುತ್ತಿದ್ದೇನೆ, ಕಾರ್ಪೊರೇಷನ್ ಚುನಾವಣೆಗಳನ್ನು ಮುಂದೂಡತಕ್ಕುದು ಒಳ್ಳೆಯದಲ್ಲ. ಚುನಾವಣೆಗಳನ್ನು ಮುಂದೂಡಿದರೆ ಅದರಿಂದ ಕೆಟ್ಟ ಪರಿಣಾಮ ಹಾಸಿ ಯಾಗುತ್ತದೆ. ಚುನಾವಣೆಯಲ್ಲಿ ಯಾವುದೇ ಪಕ್ಷ ಬರಲಿ. ಮೂರೂವರೆ ವರ್ಷಗಳಿಂದ ಅಡ್ಮಿನಿಸ್ಟ್ರೇಟರ ಆಡಳಿತವನ್ನು ಮುಂದುವರೆಸಿಕೊಂಡು ಬರುತ್ತಿರುವುದು ಒಳ್ಳೆಯದಲ್ಲ. ಆದರಿಂದ ಏನಾಗುತ್ತದೆ ಎಂದರೆ, ಒಂದು ಉದಾಹರಣೆ ಕೊಡುತ್ತೇನೆ, ಯಾವುದಾದರೂ ಒಂದು ಕ್ಷೇತ್ರದಿಂದ ಒಬ್ಬ ಸದಸ್ಯ ಚುನಾವಣೆಯಲ್ಲಿ ಗೆದ್ದು ಬಂದರೆ, ಆ ಸದಸ್ಯರು ಮತ್ತೆ ಚುನಾವಣೆಯಲ್ಲಿ ಗೆಲ್ಲಬೇಕು ಎನ್ನುವ ಆಕಾಂಕ್ಷೆ ಇರುತ್ತದೆ. ಆದ್ದರಿಂದ ಆ ಪ್ರದೇಶದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತು, ಅದನ್ನು ಒಳ್ಳೆಯ ಕ್ಷೇತ್ರವನ್ನಾಗಿ ಮಾಡತಕ್ಕ ಉದಾತ್ತವಾದ ಧ್ಯೇಯವನ್ನು ಆ ಸದಸ್ಯರು ಇಟ್ಟು ಕೊಂಡಿರುತ್ತಾರೆ. ಈಗ ಚುನಾಯಿತ ಸದಸ್ಯರು ಇಲ್ಲದೆ, ಇರುವುದರಿಂದ ಆ ಕ್ಷೇತ್ರಗಳನ್ನೆಲ್ಲ ನೋಡುವವರು ಅಧಿಕಾರಿಗಳು. ಅಧಿಕಾರಿಗಳಿಗೂ, ಸಾರ್ವಜನಿಕರಿಗೂ ಯಾವ ರೀತಿಯ ಸಂಬಂಧವೂ ಇರುವುದಿಲ್ಲ. ಕಾರ್ಪೊರೇಷನ್ನಿಗೂ ಬೆಂಗಳೂರು ನಾಗರಿಕರಿಗೂ ಸಂಬಂಧವಿಲ್ಲ. ಚುನಾವಣೆಗಳನ್ನು ನಡೆಸದೆ ಇಬ್ಬರಿಗೂ ಇದ್ದಂಥ ಸಂಬಂಧ ಕಡಿದು ಹೋಗಿದೆ. ಅವರೇ ಬೇರೆ, ನಾವೇ ಬೇರೆ ಎನ್ನುವ ರೀತಿಯಾಗಿದೆ.

5-00 P.M.

ಆದುದರಿಂದ ನಾನು ಗಂಭೀರವಾಗಿ ಪ್ರಾರ್ಥನೆ ಮಾಡುವುದು ಯಾವುದೇ ಉದ್ದೇಶದಿಂದಲೂ ಚುನಾವಣೆಯನ್ನು ಮುಂದಕ್ಕೆ ಹಾಕಬಾರದು, ಕಾಂಗ್ರೆಸ್ಸಿನವರಿಗೆ ಇದರಿಂದ ತೊಂದರೆಯಾದರೂ ಚಿಂತೆಯಿಲ್ಲ, ಯಾವ ಪಕ್ಷವಾದರೂ ಬರಲಿ, ಚುನಾವಣೆ ನಡೆಸಲೇಬೇಕು. ಚುನಾವಣೆಯನ್ನು ಯಾವ ಕಾರಣದಿಂದಲೂ ಮುಂದುವರಿಸಬಾರದು. ಆದರಿಂದ ನಿಮಗೆ ಒಳ್ಳೆಯದಾಗುವುದು, ಚುನಾವಣೆ ಮುಂದಕ್ಕೆ ಹಾಕಿದರೆ ಕೆಟ್ಟದಾಗುವುದು. ಈ ದಿವಸ ಕಾರ್ಪೊರೇಷನ್ನಿಗೆ ಇಂಜಿನಿಯರ್ ಆಗಲ, ಸಬ್‌ಓರ್ಡಿನೇಟ್ ಆಗಲಿ ಹೋದರೆ ಆತ ಹೋದಾಗ ಎಷ್ಟು ಆಸ್ತಿಯಿತ್ತೋ ಅದಕ್ಕಿಂತ ಹೆಚ್ಚಾಗಿ ಅದನ್ನು ಬಿಡುವಾಗ ಸಂಪಾದಿಸಿರುತ್ತಾನೆ. ಕಾರ್ಪೊರೇಷನ್ನಿನಿಂದ ವಾಪಸು ಬರುವಾಗ ಆತ ಭವ್ಯವಾದ ಬಂಗಲೆ ಕಟ್ಟಿಸಿಕೊಂಡಿರುತ್ತಾನೆ, ಆ ಶಕ್ತಿ ಆತನಿಗೆ ಬಂದಿರುತ್ತದೆ, ಅವನು ಒಳ್ಳೆಯ ಅನುಕೂಲ ಸ್ಥಿತಿಗೆ ಬಂದಿರುತ್ತಾನೆ. ಇದುವರೆಗೆ ಕಾರ್ಪೊರೇಷನ್ ರದ್ದುಮಾಡಿ ಅಡ್ಮಿನಿಸ್ಟ್ರೇಟರಿಗೆ ಆಡಳಿತವಹಿಸಿ ಸುಮಾರು 3 ವರ್ಷ 8 ತಿಂಗಳಾಗಿದೆ, ಈ ಅವಧಿಯಲ್ಲಿ ಆಲ್ಲಿ ನಡೆದಿರುವ

ದುರಾಡಳಿತವನ್ನು ಮನಗಂಡು ಗಂಭೀರವಾಗಿ ಧೈರ್ಯದಿಂದ ನ್ಯಾಯಾಂಗ ತನಿಖೆ ಏರ್ಪಡಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್ (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ಥಳೀಯ ಸಂಸ್ಥೆಗಳ ಸಚಿವರು ನಮ್ಮ ಮುಂದಿಟ್ಟಿರುವ ಬಿಲ್ಲಿನಲ್ಲಿ 2, 10, 19, 21 ಈ ಭಾಗಗಳನ್ನು ಬಿಟ್ಟು ಎಲ್ಲಾ ವಿಷಯಗಳನ್ನೂ ಅನುಮೋದಿಸಿ ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಇದುವರೆಗೆ ಮಾನ್ಯ ಸದಸ್ಯರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಹೆಚ್ಚಾಗಿ ಹೇಳಬೇಕಾದ ಅವಶ್ಯಕತೆಯುಲ್ಲವೆಂದು ತೋರುತ್ತದೆ. ಮೊದಲನೆಯದಾಗಿ ಕಾರ್ಪೊರೇಷನ್ ರದ್ದಾಗಿ 4 ವರ್ಷವಾಗಿದೆ. ಮಾನ್ಯ ವಿರೋಧ ಪಕ್ಷದವರು ಕಾರ್ಪೊರೇಷನ್ನಿಗೆ ಚುನಾವಣೆ ನಡೆಸದೆ 4 ವರ್ಷಗಳಿಂದ ಅನ್ಯಾಯವಾಡಿದ್ದಾರೆಂದು ಹೇಳುತ್ತಿದ್ದಾರೆ. ಆದರೆ ಅದು ರದ್ದುಮಾಡಿರುವುದೇಕೆ ಎಂದು ಯಾರೂ ಹೇಳಿದಂತೆ ಕಾಣಲಿಲ್ಲ. ಸರಿಯಾಗಿ ಆಡಳಿತ ನಡೆಸಲಿಲ್ಲ, ಚುನಾಯಿತ ಸದಸ್ಯರು ಸರಿಯಾದ ರೀತಿಯಲ್ಲಿ ಕೆಲಸಮಾಡಲಿಲ್ಲವೆಂದು ರದ್ದುಪಡಿಸಿದರು. ಆಮೇಲೆ ಆದಷ್ಟು ತೀವ್ರವಾಗಿ ಚುನಾವಣೆ ನಡೆಸಬೇಕೆಂದು ಆಡಳಿತ ಪಕ್ಷದವರೂ ಒತ್ತಾಯಮಾಡಿದ್ದೇವೆ. ಈ ಸಭೆಯಲ್ಲೂ ಹೇಳುತ್ತಿದ್ದೇವೆ. ಚುನಾವಣೆಗೆ ನಿಲ್ಲುವುದಕ್ಕೆ ಯಾರೂ ಹಿಂದು ಮುಂದು ನೋಡುವುದಿಲ್ಲ ಎಂದು ಹೇಳಿದ್ದಾರೆ.

ಇನ್ನು ಬೆಂಗಳೂರು ಮಹಾನಗರದ ಅಂದಚಂದ, ಆಗುಹೋಗುಗಳು ಮುಂತಾದುವುಗಳ ಕಡೆಗೆ ಗಮನಕೊಟ್ಟು ಸರಿಯಾದ ವ್ಯವಸ್ಥೆಮಾಡುವುದು ಕಾರ್ಪೊರೇಷನ್ ಆಡಳಿತಕ್ಕೆ ಸಂಬಂಧಪಟ್ಟ ವಿಚಾರ. ಈ ಬೆಂಗಳೂರಿನ ಕೀರ್ತಿಯನ್ನು ಕಾಪಾಡುವುದು ಕೂಡ ಅದರ ಜವಾಬ್ದಾರಿಯೇ ಆಗಿದೆ. ಸ್ಥಳೀಯ ಸಂಸ್ಥೆಗಳ ಆಡಳಿತವೇ ನಿಜವಾದ ಸ್ವರಾಜ್ಯಕ್ಕೆ ಸಂಬಂಧಪಟ್ಟ ಆಡಳಿತ, ಪ್ರಜಾಪ್ರಭುತ್ವದ ಅಡಿಪಾಯ ನಗರಾಡಳಿತ ಸಂಸ್ಥೆಗೆ ಸಂಬಂಧಪಟ್ಟಿದೆ ಎಂದು ಮಹಾತ್ಮಗಾಂಧಿಯವರು ಹೇಳಿದ್ದರು. ಆಡಳಿತ ಶುಭ್ರವಾಗಿರಬೇಕು, ದಕ್ಷತೆಯಿಂದ ಕೂಡಿರಬೇಕು ಎಂಬುದೇ ಮುಖ್ಯೋದ್ದೇಶ. ಅಲ್ಲದೆ ಜನರಿಗೆ ಸುಖಸೌಲಭ್ಯಗಳು ಕೂಡ ದೊರೆಯಬೇಕು. ಆದರೆ ಈ ಕಾರ್ಪೊರೇಷನ್ ಆಡಳಿತ ತುಂಬಾ ಕಳಂಕದಿಂದ ಕೂಡಿದೆ. ಇದರಲ್ಲಿ ಭ್ರಷ್ಟಾಚಾರ, ಲಂಚ ತಾಂಡವಾಡುತ್ತಿದೆ. ಇದನ್ನು ಸುಮ್ಮನೆ ನಾನು ಹೇಳುತ್ತಿಲ್ಲ, ನಿದರ್ಶನಗಳನ್ನು ಹೇಳುತ್ತೇನೆ. ಅಲ್ಲಿಯ ಕೆಳ ನೌಕರರು, ಅಧಿಕಾರಿಗಳು ಎಲ್ಲರೂ ಅಲ್ಲಿಗೆ ಹೋದಾಗ ಹೇಗಿದ್ದರು ಅಲ್ಲಿಂದ ಬಂದನಂತರ ಹೇಗಿದ್ದಾರೆ ಎಂಬುದನ್ನು ನೋಡಿದರೆ ಅವರು ಕ್ಷಣಾಂತರ ಹಣ ಸಂಪಾದಿಸಿ ಅರಮನೆಗಳಂತ ಮನೆಗಳನ್ನು ಕಟ್ಟಿಸಿಕೊಂಡು, ವಾಹನಗಳನ್ನಿಟ್ಟುಕೊಂಡು ಟ್ಯಾಕ್ಸಿಗಳನ್ನು ಕೂಡ ಓಡಿಸುತ್ತಿದ್ದಾರೆ. ಅದರ ನಂಬರುಗಳು ಕೂಡ ನನ್ನಲ್ಲಿದೆ. ಸರಕಾರದವರು ನೇರವಾಗಿ ಬೇಕಾದರೆ ತನಿಖೆ ಮಾಡಬಹುದು. ಈ ಬಗ್ಗೆ ಸರಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಕಟ್ಟುನಿಟ್ಟಾದ ಕ್ರಮ ಕೈಕೊಳ್ಳದಿದ್ದರೆ ಬೆಂಗಳೂರು ತಂಗಳೂರಾಗುವುದು.

ಆದಷ್ಟು ಶೀಘ್ರದಲ್ಲಿ ಚುನಾವಣೆ ನಡೆಯಬೇಕೆಂದು ಒತ್ತಾಯಮಾಡುತ್ತಿದ್ದೇವೆ. ಸರಕಾರದವರೂ ಕೂಡ ಈ ಚುನಾವಣೆಯನ್ನು ಡಿಸೆಂಬರಿನಲ್ಲಿ ಮಾಡಬೇಕೆಂಬ ಅಭಿಪ್ರಾಯದಿಂದ ಈ ಬಿಲ್ಲನ್ನು ತಂದಿದ್ದಾರೆ. ಆದರೆ ಚುನಾವಣೆಯಲ್ಲಿ ನಾಗರಿಕರು ಓಟುದಾರರು ದಕ್ಷರಾದವರನ್ನು ಆರಿಸಿದರೆ ಮಾತ್ರ ಕಾರ್ಪೊರೇಷನ್ ಆಡಳಿತ ಚೆನ್ನಾಗಿ ನಡೆಯುವುದು. ಬೆಂಗಳೂರಿನ ಭವಿಷ್ಯ ಮತದಾರರ ಕೈಲಿದೆ. ಇದನ್ನು ಅರಿತು ಯೋಗ್ಯರನ್ನು ಚುನಾವಣೆಯಲ್ಲಿ ಆರಿಸಬೇಕು. ಹಾಗೆ ಮಾಡಿ ಈ ನಗರಕ್ಕೆ ಬೆಳಕನ್ನು ಕೊಡಲೆಂದು ಆಶಿಸುತ್ತೇನೆ.

ಇನ್ನು ಕಾರ್ಪೊರೇಷನ್ ಆಡಳಿತದಲ್ಲಿ ಭ್ರಷ್ಟಾಚಾರ ಹೇಗೆ ತಲೆಯೆತ್ತಿದೆಯೆಂಬುದಕ್ಕೆ ನಿದರ್ಶನ ಹೇಳುತ್ತೇನೆ. ಈ ಊರಿನಲ್ಲಿ ಕೆಲವು ಕಾಲದಿಂದ ಕೊಳಚೆ ಪ್ರದೇಶಗಳಿವೆ, ಅವನ್ನು ನಿರ್ಮೂಲ ಮಾಡಲು ಕ್ರಮ ತೆಗೆದುಕೊಳ್ಳದಿದ್ದರೆ ಅವು ಹೆಚ್ಚುತ್ತವೆ. ಅದರಿಂದ ತೊಂದರೆಯಾಗುವುದು. ಆದುದರಿಂದ ಕೊಳಚೆ ಪ್ರದೇಶಗಳ ನಿರ್ಮೂಲನವನ್ನು ಮೊದಲು ಮಾಡಬೇಕು. ಆ ಪ್ರದೇಶದಿಂದ ಬರಬಾರದ ರೋಗ ಬರುತ್ತದೆ. ಆದಕ್ಕಾಗಿ ಹಿಂದೆ ಕೇಂದ್ರ ಸರಕಾರದವರು ಸಹಾಯ ಮಾಡುತ್ತಿದ್ದರೆಂದು ಹೇಳುವರು. ಆ ಹಣ ಲ್ಯಾಪ್ಸಾದುದರಿಂದ ಅದನ್ನು ನಿಲ್ಲಿಸಿದರು. ಈಗಲಾದರೂ ಅಲ್ಲಿಂದ ಸಹಾಯ ಪಡೆದು ಕೊಳಚೆ ಪ್ರದೇಶದ ನಿವಾಸಿಗಳಿಗೆ ಬೇರೆ ಅವಕಾಶ ಮಾಡಿಕೊಟ್ಟು, 30 ವರ್ಷಗಳಿಂದ ಅಲ್ಲಿರುವವರಿಗೆ ಬೇರೆ ಜಾಗ ಕೊಟ್ಟು ಆ ಪ್ರದೇಶ ಶುದ್ಧವಾಗುವಂತೆ ಮಾಡಿ ಅಲ್ಲಿನ ನಿವಾಸಿಗಳಿಗೆ ಶುದ್ಧವಾದ ಗಾಳಿ ಬೆಳಕು ದೊರೆಯುವಂತೆ ಮಾಡಬೇಕು. ಹೇಗಾದರೂ ಮಾಡಿ ಅವರನ್ನು ಬೇರೆ ಕಡೆಗೆ ಸಾಗಿಸಬೇಕು. ಹಾಗೇನಾದರೂ ಮಾಡಿ ಈ ನಗರವು ಶುಭ್ರವಾಗಿರುವಂತೆ ಮಾಡಬೇಕು.

(ಶ್ರೀಮತಿ ನಾಗರತ್ನಮ್ಮ ಹಿರೇಮಠ)

ಕಾರ್ಪೊರೇಷನ್ನಿನಲ್ಲಿ ಹೆಲ್ತ್ ಇರಾಜೆ ಒಂದಿವೆ, ಲೆಕ್ಕವಿಲ್ಲದಿರುವಷ್ಟು ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ, ಅವರ ಕೈಕೆಳಗೆ ಸೂಪರ್‌ವೈಜರು, ಹೆಲ್ತ್ ಇನ್‌ಸ್ಪೆಕ್ಟರುಗಳು ಇದ್ದಾರೆ. ಕಸದ ರಾಸಿ ಎಲ್ಲೆಲ್ಲಿ ನೋಡಿದರೂ ಕಾಣುವುದು, ನಮ್ಮ ಮನೆ ಮುಂದೆ ಕೂಡ ಇದೆ, ದಿನವೂ ಫೋನ್ ಮಾಡಿ ಕಸ ತೆಗೆಯುವಂತೆ ಹೇಳಿದರೂ ಪ್ರಯೋಜನವಾಗುತ್ತಿಲ್ಲ. ಎಷ್ಟೋ ಸಲ ಹೇಳಿದರೂ ಗಮನ ಕೊಡುವುದಿಲ್ಲ. ನಾವ್ಯಾಕರು ಲಾರಿಗಳಲ್ಲಿ ಕಸವನ್ನೇನೋ ತೆಗೆದುಕೊಂಡು ಹೋಗುವರು. ಆದರೆ ಎರಾ್ಲ ಕಡೆಯೂ ಸರಿಯಾಗಿ ತೆಗೆಯುವುದಿಲ್ಲ. ಮೇಲಧಿಕಾರಿಗಳೇನು ಮಾಡುವರು ? ಅವರು ನೋಡಬೇಕು. ಬರೀ ಗಾಂಧಿನಗರ, ಮೈನ್‌ರೋಡ್, ಮಹಾತ್ಮಗಾಂಧಿ ರಸ್ತೆ ಮುಂತಾದುವು ಮಾತ್ರ ಶುದ್ಧವಾದರೆ ಸಾಲದು, ಎರಾ್ಲ ಭಾಗಗಳೂ ಚೊಕ್ಕಟವಾಗಬೇಕು. ಸರಿಯಾಗಿ ಚೊಕ್ಕಟಮಾಡದಿರುವುದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿದೆ. ಸರಕಾರದವರು ಇದಕ್ಕಾಗಿ 9 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ. ಆದರೆ ಎಲ್ಲಿ ಏನು ಮಾಡುತ್ತಿದ್ದಾರೋ ಗೊತ್ತಿಲ್ಲ. ಒದಗಿಸುವ ಎಣ್ಣೆ ಮುಂತಾದ್ದನ್ನು ದೀಪ ಉರಿಸಲು ಉಪಯೋಗಮಾಡುತ್ತಿದ್ದಾರೆಂದು ಗೊತ್ತಾಗಿದೆ. ಇದನ್ನು ಅಧಿಕಾರಿಗಳು ನೋಡದೆ ನಮ್ಮನೆ ಆಫೀಸಿನಲ್ಲಿ ಕುಳಿತರೆ ಪ್ರಯೋಜನವಾಗುವುದಿಲ್ಲ, ಸರ್‌ಪ್ರೈಜ್ ವಿಜಿಟ್ ಮಾಡಿ ಸರಿಯಾಗಿ ತನಿಖೆಮಾಡಿದ್ದರೆ ಕಳಂಕ ಬರುತ್ತಾ ಇರಲಿಲ್ಲ.

ಇನ್ನು ಲೈಸೆನ್ಸ್‌ಗಳು. ಈಗ ನಮ್ಮ ಸರ್ಕಾರದವರು ನಮ್ಮ ಮುಂದೆ ಈ ಒಂದು ಬಿಲ್ಲನ್ನು ಇಟ್ಟಿದ್ದಾರೆ. ಇದರಲ್ಲಿ ಪ್ಲಾನಿಂಗ್ ಕಮಿಟಿ ಮಾಡಬೇಕೆಂದು ಹೇಳುತ್ತಾರೆ. ಈ ಕಮಿಟಿಯನ್ನು ಮಾಡುವುದು ಏಕೆ ? ಲೈಸೆನ್ಸ್‌ಗಳನ್ನು ತೆಗೆದುಕೊಳ್ಳಲಿಕ್ಕೆ. ಸಾರ್ವಜನಿಕರು ಪ್ಲಾನು ಬರೆಸಿ ಅದನ್ನು ಪ್ಲಾನಿಂಗ್ ಕಮಿಟಿಯವರಿಗೆ ಕೊಡಬೇಕು ಅವರು ಅದನ್ನು ನೋಡಿ ಸ್ಥಳ ಪರೀಕ್ಷೆಮಾಡಿ ಆ ಪ್ಲಾನು, ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ನೋಡಿ ಅವರು ಸೈನ್ ಹಾಕಿದ ಮೇಲೆ ಮತ್ತೆ ಕಾರ್ಪೊರೇಷನ್‌ಗೆ ಹೋಗಬೇಕು, ಅವರಿಂದ ಲೈಸೆನ್ಸ್ ತೆಗೆದುಕೊಳ್ಳಬೇಕು. ಈಗಲೇ ಒಂದೆರಡು ವರ್ಷಗಳಾದರೂ ಲೈಸೆನ್ಸ್ ಸಿಕ್ಕುವುದು ಕಷ್ಟ, ದುಡ್ಡಿಲ್ಲದೆ ಏನೂ ಕೆಲಸವಾಗುತ್ತಿಲ್ಲ. ಉದಾಹರಣೆಗೆ ಮೊನ್ನೆ ನನ್ನ ಹತ್ತಿರ ಒಬ್ಬರು ಬಂದು 3 ಅಂಗಡಿ ಕಟ್ಟಬೇಕು ಒಂದು ಲೈಸೆನ್ಸ್ ಕೊಡಿಸಲಿಕ್ಕೆ ಹೇಳಿ ಅಂತ ಅಂದರು. ಅಷ್ಟೆ ನಾಮಾಡ್ತಿ ಅಂತ ಹೇಳಿದೆ, ಮಾಡಿದ್ದೇನೆ ನೀವು ಸ್ವಲ್ಪ ಹೇಳ್ರಿ ಅಂತ ಅಂದರು, ನಾನು ಫೋನ್ ಮಾಡಿದೆ ಅವರು ಏನು ಹೇಳಿದರು, ಅದು ಇಂಡಸ್ಟ್ರಿಯರ್ ಏರಿಯಾನೋ ಏನೋ, ಅದಕ್ಕೆ ಕೊಡುವುದಕ್ಕೆ ಆಗುವುದಿಲ್ಲ ಅಂತ ಅಂದರು. ಆಮೇಲೆ ಹೇಗೋ ಏನೋ ಅವರು ಲೈಸೆನ್ಸ್ ತೆಗೆದುಕೊಂಡು ಬಂದರು. ಹೀಗೆ ನಡೆದರೆ ನಮ್ಮ ಸ್ಥಿತಿ ಏನಾಗಬೇಕು ? ಕಾನೂನು ರೂಲ್ಸ್ ಪ್ರಕಾರ ಹೋದವರಿಗೆ ಏನೂ ಕೆಲಸವಾಗುವ ಹಾಗೆ ಇಲ್ಲ, ದಾರಿ ಬಿಟ್ಟು ಯಾರು ಹೋಗುತ್ತಾರೆಯೋ ಅವರಿಗೆ ಎರಾ್ಲ ಆಗುತ್ತದೆ ಎಂಬ ಭಾವನೆ ಜನರಲ್ಲಿ ಬಂದಿದೆ. ಇದರ ಬಗ್ಗೆ ಯಾರು ಕಾರ್ಪೊರೇಷನ್‌ನಲ್ಲಿ ದೊಡ್ಡ ಅಧಿಕಾರಿಗಳಿದ್ದಾರೋ ಅವರು ಹೆಚ್ಚಿನ ನಿಗಾವನ್ನು ಕೊಡಬೇಕು. ಮತ್ತು ಸರ್ಕಾರದವರೂ ಕೂಡ ನಿಗಾ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ಲಾನಿಂಗ್ ಕಮಿಟಿ ಮಾಡಬೇಕೆಂದು ಏನು ಮಾಡಿದ್ದೀರಿ ಅದನ್ನು ಕೈ ಬಿಡಿ. ಈಗಲೇ ಸಾಕಾಗಿದೆ. ಲೈಸೆನ್ಸ್‌ಗೆ ತಿರುಗುವುದು, ಫೋನ್ ಮಾಡುವುದು, ದುಡ್ಡು ಕೊಡುವುದು, ಎಂ. ಎಲ್. ಎ. ಗಳು ಪ್ರವೇಶ ಮಾಡಿದರೇ ಕೆಲಸವಾಗುವುದು ಎಂಬ ಭಾವನೆ ಹೋಗಬೇಕು. ಇದನ್ನು ಬಿಟ್ಟು ಬೆಂಗಳೂರಿನವರಿಗೆ ಏನು ಉಪಯುಕ್ತವಾದ ಕೆಲಸವಾಗಬೇಕೋ ಅದನ್ನು ಮಾಡಿ. ಬೆಂಗಳೂರಿನಲ್ಲಿ ಸಾಕಾದಷ್ಟು ಹೊಲನು, ಕೊಳಕು ತೆಗೆಸಿ ಹಾಕುವುದಕ್ಕೆ ಪ್ರಯತ್ನ ಮಾಡಿ. ದೊಡ್ಡ ರಸ್ತೆಗಳನ್ನು ಮಾಡಿ, ಉದ್ಯಾನವನಗಳನ್ನು ಮಾಡಿ. ಹಿಂದೆ ಬೆಂಗಳೂರಿನ ಹವಾಗುಣ ಚೆನ್ನಾಗಿದೆ ಎಂದು ಹೇಳಿ ಇಲ್ಲಿಗೆ ಅನೇಕರು ಬರುತ್ತಾ ಇದ್ದರು, ಈಗ ಇಲ್ಲಿನ ಪರಿಸ್ಥಿತಿ ನೋಡಿ ಕಿತ್ತುಕೊಂಡು ಹೋಗುತ್ತಾ ಇದ್ದಾರೆ. ಎಲ್ಲಿ ನೋಡಿದರೂ ಜಾಗ ಇಲ್ಲ, ಈಗ ಪ್ಲಾನ್ ಮಾಡುವುದರಿಂದ ಪ್ರಯೋಜನವಿಲ್ಲ. ಲೈಸೆನ್ಸ್ ಕೊಡುವ ವೈಖರಿಯನ್ನು ಹೇಳುತ್ತೇನೆ. ನಾನು ಪೆಡ್ ಹಾಕಬೇಕೆಂದು ಲೈಸೆನ್ಸ್ ಕೇಳಿದೆ ನನಗೆ ಕೊಡಲಿಲ್ಲ. ನನ್ನ ಮನೆ ಪಕ್ಕದಲ್ಲಿ ಇರುವವರು ಒಬ್ಬರಿಗೆ ಕೊಟ್ಟಿದ್ದಾರೆ. ಅವರಿಗೆ ಯಾವ ರೀತಿ ಕೊಟ್ಟರೋ ನನಗೆ ಅರ್ಥವಾಗಲಿಲ್ಲ. ಇದಕ್ಕೆಲ್ಲಾ ಕಾರಣ ಪ್ರಾಮಾಣಿಕತೆ ಇಲ್ಲದೇ ಇರುವುದರಿಂದ ಆಗುತ್ತಿದೆ. ಪ್ರಾಮಾಣಿಕತೆ ಉಳ್ಳ ಅಧಿಕಾರಿಗಳು ಅಲ್ಲ ಇರಬೇಕು. ನ್ಯಾಯವಾದ, ಶುದ್ಧವಾದ ದಕ್ಷರಾದಂತಹ ಅಧಿಕಾರಿಗಳು ಅಲ್ಲ ಇದ್ದರೆ ನಿಜವಾಗಿಯೂ ಇಂತಹ ಪರಿಸ್ಥಿತಿ ಆಗುವುದಿಲ್ಲ. 3 ವರ್ಷಕ್ಕೂ ಮೇಲ್ಪಟ್ಟು ಅಲ್ಲ ಇರತಕ್ಕ ಅಧಿಕಾರಿಗಳನ್ನು ವರ್ಗಾಯಿಸಿ ಎಂದು ಪದೇ ಪದೇ ಹೇಳುತ್ತಾ ಇದ್ದೇವೆ, ಹಾಗೆ ಮಾಡಿದ್ದೀರಿ, ಇನ್ನೂ ಕೆಲವರು

ಇದ್ದಾರೆ ಎಂದು ಹೇಳುತ್ತಾರೆ. ಹಾಗೆ ಇದ್ದರೆ ಯಾರ ಒಂದು ಪ್ರಭಾವಕ್ಕೂ ಒಳಗಾಗದೇ, ಯಾವ ದಯಾದಾಕ್ಷಿಣ್ಯಕ್ಕೂ ಒಳಗಾಗದೇ ಅವರನ್ನು ಅಲ್ಲಿಂದ ಎತ್ತಿರಿ ಎಂದು ಹೇಳುತ್ತೇನೆ.

ಇನ್ನೊಂದು ವಿಷಯ, ಎಲ್ಲ ಸದಸ್ಯರೂ ಹೇಳಿದ್ದಾರೆ. ಬೆಂಗಳೂರಿನವರಿಗೆ ಕಾವೇರಿಯಿಂದ ನೀರು ಬರುತ್ತದೆ, ಮೂರು ಮೂರು ಮಹಡಿ ಕಟ್ಟಡಗಳನ್ನು ಕಟ್ಟುತ್ತಾ ಇದ್ದಾರೆ, ಇದೆಲ್ಲಾ ಬೆಂಗಳೂರಿನವರ ಪರಿಸ್ಥಿತಿ, ಹೊರಗಿನವರಿಗೆ ಸರಿ. ಕೊನೆಯದಾಗಿ ನಮ್ಮ ಮುಂದೆ ಬಿಲ್ಲು ಇಟ್ಟಿರುವುದರ ಬಗ್ಗೆ ಹೇಳುವುದಾದರೆ 2, 10, 19, 21, ಈ ಕ್ಲಾಸುಗಳನ್ನು ಬಿಟ್ಟು ಉಳಿದದ್ದನ್ನು ಜಾರಿಗೆ ತರಬೇಕು. ಹೆಚ್ಚು ನಿಗಾ ವಹಿಸಿ ಕೆಲಸ ಮಾಡಬೇಕು. ಬೆಂಗಳೂರಿನಲ್ಲಿ ಬಹಳ ಕೊಳಕು ಪ್ರದೇಶ ಇದೆ, ನೀರು ಇಲ್ಲ, ನರಿಯಾದ ಸಾರ್ವಜನಿಕ ಕಕ್ಕಸುಗಳು ಇಲ್ಲ, ಅದರ ಬಗ್ಗೆ ನಿಗಾ ತೆಗೆದುಕೊಳ್ಳುತ್ತಿಲ್ಲ, ಅಧಿಕಾರಿಗಳಿಗೆ ಹೇಳಿದರೆ ಅದನ್ನು ಗಮನಿಸುವುದಿಲ್ಲ, ಮಾಡುತ್ತೇವೆ ಎಂದು ಹೇಳುತ್ತಾರೆ, ಅವರು ಅವರ ಕೆಳಗಿನವರಿಗೆ ಹೇಳುತ್ತಾರೆ, ಅವರು ಆಗಲಿ ಸಾರ್ ಮಾಡುತ್ತೇವೆ ಎಂದು ಅನ್ನುತ್ತಾರೆ ಏನೂ ಮಾಡುವುದಿಲ್ಲ. ಈಗ ಕಾರ್ಪೊರೇಷನ್‌ನಲ್ಲಿ ಚುನಾಯಿತ ಸದಸ್ಯರು ಇಲ್ಲದೇ ಇರುವುದರಿಂದ ಅವರ ಜವಾಬ್ದಾರಿ ನಮ್ಮ ಮೇಲೆ ಬಿದ್ದಿದೆ, ಎಂದು ನಾವು ಹೇಳಬೇಕಾಗಿದೆ. ಪಬ್ಲಿಕ್ ವಾಟರ್ ಟ್ಯಾಪ್ಸ್‌ಗೆ ನೀರು ಕೊಡುವುದು ವಾಟರ್‌ಚೋರ್ಡಿನವರ ಜವಾಬ್ದಾರಿ ಎಂದು ಹೇಳುತ್ತಾರೆ ನೀರು ಇಲ್ಲದೇ ಪಬ್ಲಿಕ್ ಟ್ಯಾಪ್‌ಗಳನ್ನು ಕಿತ್ತು ಹಾಕಿದ್ದಾರೆ. ಈ ವಿಷಯಗಳಿಗೆ ಹೆಚ್ಚಿನ ನಿಗಾ ಕೊಟ್ಟರೆ ಬೆಂಗಳೂರಿನ ಜನರ ಮನಸ್ಸಿಗೆ ಸಮಾಧಾನವಾಗುತ್ತದೆ. ಈಗ ಏನು ಒಂದು ಅಪವಾದ ಬಂದಿದೆ ಕಾರ್ಪೊರೇಷನ್‌ನಲ್ಲಿ ಲಂಚ ತಾಂಡವವಾಡುತ್ತಾ ಇದೆ ಎಂದು. ಅದನ್ನು ಹೋಗಲಾಡಿಸುತ್ತೀರಿ ಎಂದು ನಿರೀಕ್ಷೆ ಮಾಡಿ, ಚುನಾವಣೆಯನ್ನು ಡಿಸೆಂಬರ್‌ನಲ್ಲೇ ನಡೆಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† Sri M. A. AMALORPAVAM (Bharatinagar).—Mr. Speaker, Sir, I rise to support the City of Bangalore Municipal Corporation (Amendment) Bill, 1970, that was moved yesterday. Most of the speakers who participated in the debate were very vehement with regard to the administration of the Corporation. If I also were to join in pointing out the unwelcome features of the administration obtaining in the Corporation, I would certainly be guilty of redundancy. But, in order to emphasise how very much the general public of Bangalore City are dissatisfied with the type of administration that is going on, it has become obligatory on my part to join the other members and bring it to the notice of the Minister and the other officers concerned about the defects and drawbacks that are now there in the Bangalore City Corporation.

We are happy that the Government has decided to conduct the elections. In keeping with the dictum a good Government can never be a substitute to self-government. Even taking for granted that the Municipal Corporation administration which is now run by the officers is doing a smart bit of work, under no circumstances in a democratic country could it replace the Corporation run by the elected representatives of the people. But, unfortunately, here in Bangalore even that is not present. We can have a little satisfaction that the administration run by the officers is equal to the administration that was evident during the time when the elected representatives were there.

Owing to certain errors of omissions and commissions on the part of the elected representatives the Government was constrained to supersede the Corporation—may be that we did not conduct ourselves in a proper manner—but the administration that has replaced the elected representatives is stinking and corruption ha permeated ever y

(SRI M. A. AMALORPAVAM)

branch of the Corporation. This matter has been brought to the notice of the Government and I am glad to say that the Chief Minister is very much concerned about it and he is anxious to see that many of the defects are rectified. But, unfortunately, neither the desire of the Chief Minister nor the desire of the Municipal Administration Minister has borne fruit, and still corruption continues to be galore in the Corporation. The officials who were not at all in very prosperous condition when they came there have minted money. As a member of the Ruling Party, I am pained to say that we have not been able to see that corruption is checked. In a democratic set up, decentralisation is very good and it would conduce to efficient administration. But unfortunately, what is it that we see in practice ? We have got the Water Supply Board ; we have got the Corporation ; we have got the C.I.T.B.; and we have also got the Planning Committee.

Now, according to the provisions that are contained in this Amending Bill, we have to go to the Planning Committee before a plan is sanctioned. Sir, with a sense of shame, with a sense of remorse, I have to submit to this House and bring to the notice of the Hon. Minister through you, Sir, that even to get a plan sanctioned by the Corporation Authorities, you will have to go on a pilgrimage so many number of times. if you go even twice or thrice to Thirupathi, you get the blessings of Lord Venkateswara. But if you go to Corporation Office a hundred times, we do not get the blessings or good wishes or grace of those officers there. But if we only loosen the strings of the purse, automatically the inanimate money speaks. Without money or influence, we will not get anything moved in the Corporation Office. Therefore, even when we are supporting the Bill, we are sincerely interested in the good administration of the Corporation. As members of the Ruling Party, we are very sincerely interested in upholding the cause of Government. We cannot but painfully point out the most reprehensible manner in which the administration is carried on. If we have to go to the Planning Committee, God alone should help us. We have to go to Planning Committee and we have to run back to the Engineering Department. There is so much of duplicity of work. It will not be possible for any man without influence to get the work done.

Secondly, Sir, it is not because to catch vote we say this. We always profess in the name of democracy ; we cry from house tops about democracy ; but actually we are catering only to aristocracy. We are not trying to cater to the needs of the voters. If we provide ordinary amenities like lights and good roads to poor men, they would be so grateful for it and they would unasked go to polling booths and stand by those who have done something. If we provide amenities to people who are well-placed in life, even after getting all that they want, they will sit in the comfortable sofas and criticise the Government and do not go to the polling booths. I do not understand why we should go

out of the way to help the people who never appreciate what is being done to them and not give these amenities to people who will appreciate them. Therefore, Sir, I strongly appeal to the Minister for Municipal Administration to consider this aspect. I do not say everything is rotten in the State of Denmark. Of course there are some officers and the Commissioner and others trying to take interest and do something. It is not one man's show. The other officials there, I am afraid, are not under the control of top officers. Most of the irregular things done by men in authority and position and who are able to spend a lot of money, are regularised. But when a poor man out of ignorance and out of necessity and need, commits even a small mistake, very severe notice is taken of him and immediately notice is issued.

SRI M. NAGAPPA.—Do you mean to say that the Commissioner is the most inefficient man?

SRI M. A. AMALORPAVAM.—I am very thankful to the hon. Member Sri Nagappa for trying to put so many words into my mouth and ideas into my head. I wish that my imagination could be so fertile as to put such kind of ideas into my mind. But I should say the Minister is good; some officers are good. This kind of thing is not particular to one Department. Unfortunately, it is the bane of the country. The Corporation is there to cater to the needs of the poor people, the common people who are in need, but unfortunately, except that we talk here on the floor of the Assembly, except that we talk on the platforms and issue press statements, when we come to brass tack, we speak of lack of finance and rules and regulations. But when a big officer residing in a locality complains of mosquito menace, immediately you find scores of people running there like an army, and trying to see that place is got cleaned; if a top officer phones up the Corporation Authorities, that complaint is attended to. But if hundreds of poor people go and complain, they say, we shall see about it and we shall consider as if mendicants or beggars go before these presiding dieties to get something. That kind of attitude should never be tolerated. Here and now I appeal most sincerely to the Hon. Minister that the interest of the common man, the needs of the poor people must be first attended to. It may cost crores of Rupees. You must find the money by some means or the other. It is a socialist Government. I sincerely appeal to the Minister to kindly see that all the grievances which we have brought forward to his notice are remedied as early as possible, atleast during the two months' time before election; if he were to constitute an Advisory Committee immediately, we will have some voice there in the administration and that will go a long way in mitigating the sufferings of poor people and attending to the basic necessities of poor people.

With these observations I welcome the provisions of the Bill.

5-30 P.M.

†ಶ್ರೀ ಬಿ. ಎಂ. ವಾಜೀದ್ (ನಗರಾಡಳಿತ ಶಾಖೆಯ ರಾಜ್ಯ ಮಂತ್ರಿಗಳು).—ಸನ್ಮಾನ್ಯ ಸಭಾಪತಿಗಳೇ, 1970ನೇ ಬೆಂಗಳೂರು ನಿಬ ಮುನಿಸಿಪಲ್ ಕಾರ್ಪೊರೇಷನ್ ತಿದ್ದುಪಡಿಯ

(ಶ್ರೀ ಬಿ. ಎಂ. ಪಾಟೀಲ್)

ಮೇರೆ ಇಲ್ಲಿಯವರೆಗೂ ಸನ್ಮಾನ್ಯ ಮಿತ್ರರು ಕೆಲವರು ಮಾತನಾಡಿದ್ದಾರೆ. ಸಾಮಾನ್ಯವಾಗಿ ಎಲ್ಲ ಸನ್ಮಾನ್ಯ ಸದಸ್ಯರುಗಳು ಮಾತನಾಡುವಾಗ ಈ ತಿದ್ದುಪಡಿ ಮಸೂದೆಯು ವ್ಯಾಪ್ತಿಯಲ್ಲಾಗಲೀ ಅಥವಾ ಒಂದು ಕಾನೂನು ಪರಿಮಿತಿಯಲ್ಲಾಗಲೀ ಮಾತನಾಡಿದ್ದಾರೆಂದು ನಾನು ಭಾವಿಸಿ ಕೊಂಡಿಲ್ಲ. ಸಾಮಾನ್ಯವಾಗಿ ಎಲ್ಲರೂ ಇಲ್ಲಿಯವರೆಗೂ ವಿಧಾನಸಭೆಯು ನಡವಳಿಕೆಗಳನ್ನು ಅನುಸರಿಸಿಕೊಂಡು ಮಾತನಾಡಿದ್ದಾರೆ. ಹೊಸದಾಗಿ ಏನೂ ಮಾತನಾಡಲಿಲ್ಲ. ಮೊದಲನೆಯ ದಾಗಿ ಬೆಂಗಳೂರು ಕಾರ್ಪೊರೇಷನ್ನಿನಲ್ಲಿ ಚುನಾವಣೆ ನಡೆಯಬೇಕು, ಜನಗಳ ಅಡಳಿತ ಬರ ಬೇಕೆಂದು ಹೇಳಿದ್ದಾರೆ. ಸನ್ಮಾನ್ಯ ವಿರೋಧ ಪಕ್ಷದ ಮಿತ್ರರುಗಳಿಗೆ ಪ್ರಜಾಸತ್ತೆಯಲ್ಲಿ, ಪ್ರಜಾ ಸತ್ತೆಯ ರೀತಿ ನೀತಿಗಳಲ್ಲಿ, ಪ್ರಜಾಸತ್ತೆಯ ಆಕ್ಷೋತ್ತರಗಳಲ್ಲಿ ಮತ್ತು ಪ್ರಜಾಸತ್ತೆಯ ಮೂಲ ಭೂತ ತತ್ವಗಳಲ್ಲಿ ಎಷ್ಟು ವಿಶ್ವಾಸವಿದೆಯೋ ಅಷ್ಟು ವಿಶ್ವಾಸ ಸರ್ಕಾರಕ್ಕೂ ಇದೆಯೆಂದು ನಾನು ಹೇಳಬಯಸುತ್ತೇನೆ. ಈಗಾಗಲೇ ನಗರ ಕಾರ್ಪೊರೇಷನ್ ಚುನಾವಣೆಗಳನ್ನು ನಿರ್ಧಾರ ತೆಗೆದುಕೊಂಡು ಅದನ್ನು ಈಗಾಗಲೇ ವ್ಯಕ್ತಪಡಿಸಿದ್ದೇನೆ. ಈ ಡಿಸೆಂಬರ್‌ನಲ್ಲ ಕಾರ್ಪೊರೇಷನ್ ಚುನಾವಣೆಗಳನ್ನು ನಡೆಸಬೇಕೆಂಬುದು ಸರ್ಕಾರದ ಉದ್ದೇಶ ಎಂದು. ಸಂಬಂಧ ಪಟ್ಟ ಕಾರ್ಪೊರೇಷನ್ ಅಧಿಕಾರಿಗಳಿಗೆ ಈಗಾಗಲೇ ತಿಳಿಸಿದ್ದೇನೆ. ಈ ನಿರ್ಧಾರದ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಅವರು ಮಾಡಬೇಕೋ, ಏನೇನು ಪ್ರಿಪರೇಷನ್‌ಗಳನ್ನು ಮಾಡಿಕೊಳ್ಳಬೇಕೊ ಅವನ್ನೆಲ್ಲಾ ಈಗಾಗಲೇ ಅವರು ಮಾಡಿಕೊಳ್ಳುತ್ತಿದ್ದಾರೆ. ಎಲೆಕ್ಟೋರಲ್ ರೊಲ್ಸನ್ನು ಈಗಾಗಲೇ ಪ್ರಿಪೇರ್ ಮಾಡುತ್ತಿದ್ದಾರೆ. ಮುಂದೆ ಕ್ಯಾರೆಂಡರ್ ಆಫ್ ಇವೆಂಟ್ಸ್‌ನ್ನು ರಿಟರ್ನಿಂಗ್ ಆಫೀಸರ್ ಅವರು ಹಾಕಬೇಕಾಗುತ್ತದೆ. ಅದು ರಿಟರ್ನಿಂಗ್ ಆಫೀಸರಿಗೆ ಸಂಬಂಧಪಟ್ಟ ವಿಷಯ. ಅವರ ಇದರ ಬಗ್ಗೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಾರೆಂದು ನಾನು ಹೇಳಬಯಸುತ್ತೇನೆ ಅಲ್ಲವೇ?

ಶ್ರೀ ಟಿ. ಆರ್. ಶಾಮಣ್ಣ.—ಹಿಂದೆ ಕೊಟ್ಟ ಬರವಸೆಯ ಹಾಗೆ ಈ ಸಾರಿ ಮೋಸ ಆಗುವುದಿಲ್ಲ

ಶ್ರೀ ಬಿ. ಎಂ. ಪಾಟೀಲ್.—ಸನ್ಮಾನ್ಯ ಮಿತ್ರರು ನನಗೆ ಅನೇಕ ಸಾರಿ ಹೇಳಿದ್ದಾರೆ. ನಾನೂ ಅವರಿಗೆ ಹೇಳಿದ್ದೇನೆ. ಕಾರ್ಪೊರೇಷನ್ ಚುನಾವಣೆಯಾಗುವುದಕ್ಕೆ ಅವರಷ್ಟೇ ನನಗೂ ಆಶೆ ಇದೆ. ಅವರು ಅನೇಕ ಸಾರಿ ಮಾತನಾಡಿದರೂ ಚುನಾವಣೆಯನ್ನು ನಡೆಸುವುದಕ್ಕೆ ಯಾವ್ಯಾವ ವಿಧಿಗಳನ್ನು ಅನುಸರಿಸಬೇಕು, ಆ ವಿಧಿಗಳನ್ನು ಸರಿಯಾಗಿ ಅನುಸರಿಸುವಾಗ ಏನಾದರೂ ದೋಷ ದೋಷಗಳಿದ್ದರೆ ಅವನ್ನು ರೆಕ್ಟಿಫೈ ಮಾಡಿ ಚುನಾವಣೆಗಳನ್ನು ನಡೆಸಬೇಕೆಂದು ಹೇಳಿದ್ದಾರೆ. ನಾನು ಅವರಿಗೂ ಸ್ಪೆಸಿಫಿಕ್ಕಾಗಿ ಹೇಳಿದ್ದೇನೆ. ಆ ಪ್ರಕಾರ ಇಲ್ಲ ನಾವು ಈಗ ತಿದ್ದುಪಡಿ ಮಸೂದೆ ಯನ್ನು ತರುತ್ತಿದ್ದೇವೆ. ಇಲ್ಲಿಯವರೆಗೂ ಇದಕ್ಕೆ ಕಾರ್ಪೊರೇಷನ್ ಎಲೆಕ್ಟೋರಲ್ ರೋಲ್ ತಯಾರುಮಾಡಬೇಕೆಂದು ಇತ್ತು. ಆದರೆ ಈ ತಿದ್ದುಪಡಿ ಮಸೂದೆಯಲ್ಲಿ ಅಸೆಂಬ್ಲಿಗೆ ತಯಾರು ಮಾಡಿದಂಥ ಓಟರುಗಳ ಪಟ್ಟಿ ಇದಕ್ಕೆ ಅನ್ವಯಿಸಬೇಕೆಂದು ಹೇಳಿದ್ದೇನೆ.

ಇನ್ನು ಅನೇಕ ಮಿತ್ರರು ಭ್ರಷ್ಟಾಚಾರ, ಲಂಚಗುಳಿತನದಿಂದ ಅಡಳಿತ ಕುಸಿದುಬಿದ್ದಿದೆ ಎಂಬುದಾಗಿ ಹೇಳಿದ್ದಾರೆ. ಕಾರ್ಪೊರೇಷನ್ನಿನಲ್ಲಿ ಭ್ರಷ್ಟಾಚಾರ ಇರಬಹುದು, ಲಂಚಗುಳಿತನ ಇರಬಹುದು. ಆದರೆ ಮಾನ್ಯ ಸದಸ್ಯರು ಏನು ಮಾತನಾಡಿದರೂ ಅದು ಸ್ವಲ್ಪಮಟ್ಟಿಗೆ ಉತ್ಪ್ರೇಕ್ಷೆ ಯಿಂದ ಕೂಡಿದೆ. ಸಮಾಜದಲ್ಲಿ ಒಳ್ಳೆಯದು, ಕೆಟ್ಟದು ಇರುತ್ತದೆ. ಆದ್ದರಿಂದ ಇಂತಹ ಕಾರ್ಪೊರೇಷನ್ನಿನಲ್ಲಾಗಲೀ ಅಥವಾ ಬೇರೆ ಯಾವ ಇಲಾಖೆಯಲ್ಲಾಗಲೀ ಎಲ್ಲೆಯೇ ಆಗಲೀ, ಪ್ರತಿಯೊಂದು ಸಮಾಜದಲ್ಲಿಯೂ ಸ್ವಲ್ಪಮಟ್ಟಿಗಾದರೂ ಒಳ್ಳೆಯದೂ ಕೆಟ್ಟದ್ದೂ ಇರುತ್ತದೆ. ಅದನ್ನು ವಿಚಾರಮಾಡಬೇಕು.

ಶ್ರೀ ವಾಟಾಳ್ ನಾಗರಾಜ್.—ಕೇವಲ ಒಬ್ಬ ಅಸಿಸ್ಟೆಂಟ್ ಇಂಜನಿಯರ್ ಒಂದು ಸಿನಿಮಾ ಥಿಯೇಟರ್ ಮತ್ತು ಒಂದು ಮನೆಯನ್ನು ಕಟ್ಟಿಸಿದ್ದಾನೆ.

ಶ್ರೀ ಬಿ. ಎಂ. ಪಾಟೀಲ್.—ಈಗ ಯಾವ ರೀತಿ ಒಂದು ಸಮಾಜದಲ್ಲಿ ಒಳ್ಳೆಯದು, ಕೆಟ್ಟದ್ದೂ ಇರುತ್ತದೋ ಅದೇ ಪ್ರಮಾಣದಲ್ಲಿ ಕಾರ್ಪೊರೇಷನ್ ಮತ್ತು ಇತರೇ ಸಂಸ್ಥೆಗಳಲ್ಲಿಯೂ ಇರು ತ್ತದೆ.

ಶ್ರೀ ಎಂ. ನಾಗಪ್ಪ.—ಆ ಪ್ರಮಾಣದಲ್ಲಿ ವ್ಯತ್ಯಾಸವಾಗಿದೆ. ನೂರಕ್ಕೆ 70ರಷ್ಟು ಕರಪ್‌ಷನ್ ಇದ್ದರೆ, ಮಿಕ್ಕ ನೂರಕ್ಕೆ 30ರಷ್ಟು ಒಳ್ಳೆಯ ಜನ ಇರಬಹುದು. ಅದು ಕಡಿಮೆಯಾಗಬೇಕು.

ಶ್ರೀ ಬಿ. ಎಂ. ಪಾಟೀಲ್.—ಕಾರ್ಪೊರೇಷನ್ನಿಗೆ ಬರತಕ್ಕ ಅಧಿಕಾರಿಗಳು ಎಲ್ಲಿಂದ ಬರುತ್ತಾರೆ? They are not coming from heaven. ಯಾರ ಮೇಲೆ ಹೇಳಿದರೂ ಇಲ್ಲ ವಾಸ್ತವಿಕ ವಿಷಯಗಳನ್ನು ಮಾನ್ಯ ಸದಸ್ಯರು ಹೇಳಬೇಕು.

ಶ್ರೀ ಕೆ. ಎಚ್. ರಂಗನಾಥ್.—ಒಂದು ಲೈಸನ್ಸ್‌ಗೆ 20 ಸಾವಿರ ರೂಪಾಯಿಗಳ ಲಂಚ ತೆಗೆದುಕೊಂಡು ಕೊಟ್ಟಿದ್ದಾರೆ. ಎಷ್ಟೋ ಜನರು ಲೈಸೆನ್ಸ್ ಅನೇಕ ವರ್ಷಗಳಿಂದ ತೆಗೆದು ಕೊಳ್ಳದೆ ಇದ್ದಾರೆ. ಅದನ್ನು ನಾವು ನೋಡುತ್ತಿದ್ದೇವೆ. ನಮ್ಮಂಥ ಗೊತ್ತಿರುವವರಿಗೇ ಅಲ್ಲ ಲೈಸನ್ಸ್ ಕೊಡುವುದಕ್ಕೆ ವರ್ಷಾನುಗಟ್ಟಲೆ ಮಾಡುತ್ತಿದ್ದಾರೆ.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಏನೊಂದು ಆಪಾದನೆಯನ್ನು ಮಾಡುತ್ತಿದ್ದಾರೋ-ಅದು ಭ್ರಷ್ಟಾಚಾರವಲ್ಲ, ಲಂಚಗುಳಿತನವಲ್ಲವೆಂದು ನಾನು ಹೇಳುತ್ತೇನೆ. ಕಾರ್ಪೊರೇಷನ್ ಆಡಳಿತದಲ್ಲಿ ವ್ಯಕ್ತಿಗಳು ಯಾರೇ ಇರಲಿ ಅವರೂ ಸಹ ಒಂದು ಸಮಾಜದಿಂದ ಬಂದವರು. ಆದ್ದರಿಂದ ನಾವು ವಾಸ್ತವಿಕ ವಿಷಯಗಳನ್ನು ವಿಚಾರಮಾಡಬೇಕು.

ಶ್ರೀ ಬೋಳ ರಘುರಾಮಶೆಟ್ಟಿ.—ಮಂತ್ರಿಗಳೂ ಸಹ ಸಮಾಜದಿಂದರೇ ಬರುತ್ತಾರೆ. ಅವರೂ ಹಾಗೆಯೇ ಇರಬಹುದು.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ವಿರೋಧ ಪಕ್ಷದ ಸದಸ್ಯರೂ ಕೂಡ ಆ ರೀತಿಯಾಗಿಯೇ ಬರುತ್ತಾರೆ. ಅಂತಮೇಲೆ ನಮ್ಮಲ್ಲಿ ಭ್ರಷ್ಟಾಚಾರ ಇರಬೇಕು, ಕರಪ್‌ಷನ್ ಇರಬೇಕೆಂದು ಅರ್ಥವಲ್ಲ. ನಾವು ಇಂತಹ ಭ್ರಷ್ಟಾಚಾರ ಮತ್ತು ಕರಪ್‌ಷನ್‌ಗಳ ನಿರ್ಮೂಲನಕ್ಕಾಗಿ ಯಾವ್ಯಾವ ಕಾರ್ಯಕ್ರಮಗಳನ್ನು ಅನುಸರಿಸಬೇಕೋ ಅಂತಹ ಕಾರ್ಯಕ್ರಮಗಳನ್ನು ಜಾರಿಗೆ ತರುತ್ತಿದ್ದಾರೋ ಇಲ್ಲವೋ ಎಂಬ ಬಗ್ಗೆ ಹೆಚ್ಚು ಗಮನವನ್ನು ಕೇಂದ್ರೀಕೃತ ಮಾಡಬೇಕಾಗಿದೆ. ಈಗಾಗಲೇ ವಿಜಿಲೆನ್ಸ್ ಕಮಿಷನ್ ಎಂಬುದು ಕಾರ್ಪೊರೇಷನ್ ಅಧಿಕಾರಿಗಳು ಯಾರು ಇದ್ದಾರೋ ಅವರ ಮೇಲೆ ಅನೇಕ ವಿಚಾರಗಳನ್ನು ಮಾಡುತ್ತಿದೆ, ಮತ್ತು ಲಂಚಗುಳಿತನವನ್ನು ಹಿಡಿಯುತ್ತಿದ್ದಾರೆ.

ಶ್ರೀ ಕೆ. ಎಚ್. ರಂಗನಾಥ್.—ಅವರೇ ಲಂಚ ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ಬಿ. ಎಂ. ಪಾಟೀಲ್.—ಈ ವಿಚಾರವನ್ನು ವಿಜಿಲೆನ್ಸ್ ಕಮಿಷನ್ನಿನವನ ಗಮನಕ್ಕೆ ತಂದಿದ್ದೇವೆ. ಆದ್ದರಿಂದ ಇನ್ನೂ ಕರಪ್‌ಷನ್ ಅಲ್ಲಿ ಜಾಸ್ತಿ, ಇದೆಯೆಂದು ಹೇಳುವುದನ್ನು ನಾನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಆದರೆ ಸ್ಪೆಸಿಫಿಕ್ಕಾಗಿ ಎಲ್ಲೆಲ್ಲಿ ಯಾರ್ಯಾರು ಅಧಿಕಾರಿಗಳು ಕರಪ್ಟ್ ಇದ್ದಾರೋ ಅಂತಹವರ ಮೇಲೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಮತ್ತು ಯಾವ ಕಾನ್‌ಕ್ರೀಟ್ ಇನ್‌ಸ್ಟೆನ್ಸಸ್‌ನ್ನು ಕೊಟ್ಟಿದ್ದರೋ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸಿದ್ದೇನೆ. ಅಲ್ಲದೆ ಆಡಳಿತ ಮಟ್ಟವನ್ನು ಸುಧಾರಿಸುವುದಕ್ಕೆ ಏನೇನು ಮಾಡಬೇಕೋ ಅವನ್ನು ಈಗಾಗಲೇ ಮಾಡಿದ್ದೇವೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಒಬ್ಬ ಜೂನಿಯರ್ ಅಸಿಸ್ಟೆಂಟನ್ನು ಡೆಪ್ಯುಟಿ ಇಂಜನಿಯರ್ ಆಗಿ ಮಾಡಿದ್ದಾರೆ. ಅವನು ಈಗ ಕರಪ್ಟ್ ಆಗಿದ್ದಾನೆ. ಅವನ ಮೇಲೆ ಹೈಕೋರ್ಟ್‌ಸ್ಟೇ ಬಂದಿದೆ ಅದನ್ನು ಮಾಡಿದವರು ಯಾರು?

ಶ್ರೀ ಬಿ. ಎಂ. ಪಾಟೀಲ್.—ಈ ರೀತಿ ಮಧ್ಯೆ ನೀವು ಮಾತನಾಡಿದರೆ ನನಗೆ ಆಗುವುದಿಲ್ಲ. Let him give established corrupt cases and prove them. We will take action.

ಶ್ರೀ ವಾಟಾಳ್ ನಾಗರಾಜ್.—ಪ್ರಾಮಾಣಿಕತೆಯಿಂದ ಒಂದು ಎನ್‌ಕ್ವೈರಿ ಕಮಿಷನ್ನನ್ನು ಮಾಡುತ್ತೀರಾ? ಅಥವಾ ಒಂದು ಜುಡಿಷಿಯರ್ ಕಮಿಟಿಯನ್ನೇನಾದರೂ ಮಾಡುತ್ತೀರಾ? ಆ ರೀತಿ ಮಾಡಿದರೆ ಅಂತಹ ಕೇಸುಗಳನ್ನು ಬೇಕಾದಷ್ಟು ಹಿಡಿದುಕೊಡುತ್ತೇವೆ.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಮಾತನಾಡಿದಾಗ ನಾನು ಇಂಟರಪ್ಟ್ ಮಾಡಲಿಲ್ಲ. ಆದ್ದರಿಂದ ದಯಮಾಡಿ ಅವರು ಯಾವರೀತಿಯಲ್ಲಿಯೂ ಮಧ್ಯೆ ಇಂಟರ್‌ವೀನ್ ಮಾಡದೆ ಕೇಳಬೇಕು. ನನ್ನ ಉತ್ತರ ಪೂರ್ತಿಯಾದಮೇಲೆ ಬೇಕಾದರೆ ಕ್ಲಾರಿಫಿಕೇಷನ್ನನ್ನು ಕೇಳಲಿ, ಹೇಳುತ್ತೇನೆ. ಇದೇ ರೀತಿಯಲ್ಲಿ ಇಂಟರಪ್ಟ್ ಮಾಡಿದರೆ, I am prepared to sit.

ಶ್ರೀ ಅಜೀಜ್ ಸೇಟ್.—ಹೆಲ್ತ್ ವಿಷಯಗಳ ಬಗ್ಗೆ ಮಾತ್ರ ಇಂಟರಪ್ಟ್ ಮಾಡಬಹುದು. ಮಂತ್ರಿಮಂಡಲದಲ್ಲಿ ಕರಪ್ಟ್ ಇದ್ದರೂ, ಅವರ ಮೇಲೂ ತಕ್ಕ ಕ್ರಮವನ್ನು ಅನುಸರಿಸಬೇಕು.

ಶ್ರೀ ಬಿ. ಎಂ. ಪಾಟೀಲ್.—ಪ್ರಾಮಾಣಿಕತೆ ಕೇವಲ ಕೆಲವೇ ವ್ಯಕ್ತಿಗಳ ಸ್ವತ್ತಲ್ಲ. ಯಾರಾದರೂ ನಾನೊಬ್ಬನೇ ಪ್ರಾಮಾಣಿಕನೆಂದು ಭಾವನೆ ಇಟ್ಟರೆ ಅದು ಸರಿಯಲ್ಲ. ಅವನ್ನು ಬಹಳ ಖೇದದಿಂದ ನಾನು ಹೇಳಬೇಕಾಗುತ್ತದೆ. ಅಂತಹ ಭಾವನೆಯನ್ನು ಅವರು ಇಟ್ಟುಕೊಳ್ಳಬಾರದು. ಯಾವಾಗಲೂ ನಮಾಜದಲ್ಲಿ ಒಳ್ಳೆಯವರಿದ್ದರೆ, ಅದನ್ನೂ ಒಪ್ಪಿಕೊಳ್ಳಬೇಕಾಗಿದೆ. ಕೇವಲ ಆನೆಸ್ಟಿ ನಿಮ್ಮ ಒಬ್ಬರ ಸೊತ್ತಲ್ಲ. ನಿಮ್ಮಷ್ಟೇ ಆನೆಸ್ಟಿ ಇದ್ದವರು ಸಾಕಾದಷ್ಟು ಜನರು ಸಮಾಜದಲ್ಲಿ ಇದ್ದಾರೆ. ಆದರೆ ಆಡಳಿತಮಟ್ಟವನ್ನು ಸುಧಾರಿಸಬೇಕಾದರೆ, ಕರಪ್‌ಶನ್ ತೆಗೆದು ಹಾಕಬೇಕಾದರೆ, ಅದಕ್ಕೆ ಏನೇನು ಕಾರ್ಯಕ್ರಮಗಳನ್ನು ಹಾಕಬೇಕು, ಅದನ್ನು ಹಾಕಿಕೊಂಡಿದ್ದೇವೆ. ಕಾರ್ಪೊರೇಷನ್‌ನ್ನೂ ಈ ಎಜಿಟೇನ್ಸ್ ಕಮಿಷನಿನ ವ್ಯಾಪ್ತಿಯೊಳಗೆ ಒಳಪಡಿಸಿದ್ದೇವೆ. ಆದ್ದರಿಂದ ಅಲ್ಲಿ ಯಾರಾದರೂ ಕರಪ್ಟ್ ಇದ್ದರೆ, ಅಂಥ ಸ್ಪೆಸಿಫಿಕ್ ಚಾರ್ಜಸ್‌ನ್ನು ಸರ್ಕಾರದ ಗಮನಕ್ಕೆ ತಂದಾಗ, ಸರ್ಕಾರದವರು ಯಾರಾದರೂ ಅಂಥ ವ್ಯಕ್ತಿಯನ್ನು ಉಳಿಸುವುದಕ್ಕೆ ಪ್ರಯತ್ನ ಮಾಡಿದರೆ, ಅದು ಸರ್ಕಾರದ ತಪ್ಪಾಗುತ್ತದೆ. ಆದರೆ ನಾನಾದರೂ ಹೇಳುತ್ತೇನೆ, ಅವನು ಎಷ್ಟೇ ದೊಡ್ಡ ಆಫೀಸರಿರಲಿ, ಅಥವಾ ಸಣ್ಣ ನೌಕರನಿರಲಿ, ಸರ್ಕಾರ ಅಂಥವರ ಮೇಲೆ ಯಾವ ದಾಕ್ಷಿಣ್ಯವೂ ಇಲ್ಲದೆ, ಯೋಗ್ಯ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂದು ಭರವಸೆಯನ್ನು ಕೊಡಬಲ್ಲೆ.

ಇನ್ನೊಂದು ಮಾನ್ಯ ವಾಟಾಳ್ ನಾಗರಾಜರವರು ಹೇಳಿದರು, ಇವತ್ತು ವಾಟರ್ ಬೋರ್ಡು, ಟ್ರಸ್ಟ್ ಬೋರ್ಡು, ಎಂದು ಹಲವಾರು ಬೋರ್ಡುಗಳನ್ನು ಮಾಡಿದ್ದಾರೆ ಮತ್ತು ಇದರಿಂದ ಕಾರ್ಪೊರೇಷನ ಅಧಿಕಾರವನ್ನು ಕಿತ್ತುಕೊಂಡಿದ್ದಾರೆ ಎಂದು. ಆದರೆ, ಕಾರ್ಪೊರೇಷನಿನ ಅಧಿಕಾರಕ್ಕೆ ಯಾವ ಚ್ಯುತಿಯು ಬರುವಂತಹ ತಿದ್ದುಪಡಿಯನ್ನು ಸರ್ಕಾರ ತಂದಿಲ್ಲ. ಅವರು ಮತ್ತೆ ಹೇಳಿದ್ದಾರೇನೆಂದರೆ, ಕಾರ್ಪೊರೇಷನ್ ಕನಗುಡಿಸುವ ಒಂದು ಸಂಸ್ಥೆ ಎಂದು. ನಾನಾದರೂ ಹೇಳುತ್ತೇನೆ, ಈ ಕನ ಗುಡಿಸುವ ಕೆಲಸ ಕೂಡ ಅತೀ ಮುಖ್ಯವಾದ ಕೆಲಸ, ಅದು ಸ್ಯಾನಿಟೇಶನ್ ಕೆಲಸವಾಗುತ್ತದೆ; ಬಹಳ ಮಹತ್ವದ್ದು. ಇಂಥ ಮಹತ್ವವಿಲ್ಲದ ಸಂಸ್ಥೆಯಾದರೆ, ಏಕೆ ಪ್ರತಿನಿಧಿಗಳಾಗಿ ಚುನಾಯಿತರಾಗಿ ಬರುವುದಕ್ಕೆ ಜನರು ಪ್ರಯತ್ನಪಡುತ್ತಾರೆ? ಇವರ ಮಾತಿನಲ್ಲಿ ವಿರೋಧವಾದ ಮಾತೇ ಹೊರತು ಮತ್ತೇನಿಲ್ಲ.

ಈಗ ತಿದ್ದುಪಡಿಗೆ ಸಂಬಂಧಪಟ್ಟ ಮುಖ್ಯವಾದ ಅಂಶಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮಸೂದೆ ಏಕೆ ತಂದಿದ್ದೇವೆಂದರೆ, ಇಲ್ಲಿಯವರೆಗೆ ಈ ವೇಕೆಂಟ್ ಲ್ಯಾಂಡ್ಸ್ ಏನಿದ್ದವು, ಅವುಗಳಿಗೆ ಟ್ಯಾಕ್ಸ್ ಕಾಕುತ್ತಿದ್ದೆವು; ಅದನ್ನು ಈಗ ತೆಗೆಯಬೇಕೆಂಬುದು ಇದರ ಉದ್ದೇಶ. ಈ ಟ್ಯಾಕ್ಸ್ ಏಕೆ ಕೊಡಬೇಕೆಂಬುದು ಜನರ ಒಂದು ಮನೋವ್ಯತ್ತಿಯಾಗಿತ್ತು. ಅದಲ್ಲದೆ, ಬೆಂಗಳೂರು ನಗರದ ಸುಂದರತೆಯನ್ನು ಕಾಪಾಡುವುದಕ್ಕೋಸ್ಕರ ಆ ತೆರಿಗೆ ಭಾರವನ್ನು ಈ ಮಸೂದೆಯಲ್ಲಿ ಕನ್‌ಶೆಷನ್ ಮೂಲಕ ಇಳಿಸಲಾಗಿದೆ. ಅದಲ್ಲದೆ ಖಾಲಿ ನಿವೇಶನಗಳನ್ನು ಅನೇಕ ಜನರು ಕೊಂಡು ಕೊಂಡು ಅದನ್ನು ಸ್ಪೆಕುಲೇಟಿವ್ ಪರ್ಪಸಿನಿಂದ ಇಟ್ಟುಕೊಂಡು, ನಂತರ ಮಾರಿ ತುಂಬಾ ಲಾಭ ಪಡೆಯುತ್ತಿದ್ದಾರೆ. ಅಂಥವರಿಗೆ ಸ್ಕೋಪ್ ಕೊಡಬಾರದು ಎಂದು ಇದರಲ್ಲಿ ಪ್ರಾಪರ್ಟಿ ಟ್ಯಾಕ್ಸ್ ಎಂದು ಹಾಕುತ್ತಿದ್ದೇವೆ. ಪ್ರಾಪರ್ಟಿ ಟ್ಯಾಕ್ಸ್ ಹಾಕುವಾಗ ಅದು ಇಲ್ಲಿಯವರೆಗೆ ವೇಕೆಂಟ್ ಲ್ಯಾಂಡ್ ಟ್ಯಾಕ್ಸ್ 0.4 ಪರ್‌ಸೆಂಟ್ ಆಫ್ ದಿ ಮಾರ್ಕೆಟ್ ವ್ಯಾಲ್ಯೂ ಎಂದು ಏನು ಹಾಕುತ್ತಿದ್ದೆವು, ಅದಕ್ಕಿಂತ ಜಾಸ್ತಿಯಾಗಬಾರದು ಎಂದು ಮಾಡುತ್ತೇವೆ. ಇದರ ಬಗ್ಗೆ ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆಯನ್ನು ಕೊಡಬಯಸುತ್ತೇನೆ. ಈ ಟ್ಯಾಕ್ಸ್ ಅಂದರೆ, 15 ಪರ್‌ಸೆಂಟ್ ಆಫ್ ದಿ 10 ಮಿಂತ್ಸ್ ರೆಂಟರ್ ವ್ಯಾಲ್ಯು, ಇದು 0.4 ಪರ್‌ಸೆಂಟ್ ಆಫ್ ದಿ ಮಾರ್ಕೆಟ್ ವ್ಯಾಲ್ಯೂ ಏನಿದೆ, ಅದಕ್ಕಿಂತ ಹೆಚ್ಚಾಗುತ್ತದೆ ಎಂದು ನಾನು ಭಾವಿಸುವುದಿಲ್ಲ.

ಶ್ರೀ ಅಜೀಜ್ ಸೇಟ್.—ಅದರ ವ್ಯಾಲ್ಯುವೇಶನ್ ಹೇಗೆ ಮಾಡುತ್ತೀರಾ?

ಶ್ರೀ ಬಿ. ಎಂ. ಪಾಟೀಲ್.—ಅದು ಸಾಧಾರಣ ವೇಕೆಂಟ್ ಲ್ಯಾಂಡ್ ಎಷ್ಟು ಫೆಚ್ ಮಾಡುತ್ತದೆ ಅದನ್ನು ನೋಡಿಕೊಂಡು ಮಾಡುತ್ತೇವೆ.

ಇನ್ನು ಮಾನ್ಯ ಸದಸ್ಯರನೇಕರು ಕೆಲವು ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಈ ಓಪನ್ ಸ್ಪೇಟ್ಸ್ ಜನರಿಗೆ ಒಂದು ಭಾರ ಆಗಬಾರದು ಎಂದು ಹೇಳಿದ್ದಾರೆ. ಅದನ್ನು ಒಪ್ಪಿಕೊಂಡು ಕಾರ್ಪೊರೇಷನಿನ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆಗಳನ್ನು ಕೊಡುತ್ತಿದ್ದೇವೆ. ಯಾವ ಒಂದು ಕೇಸಿನಲ್ಲೂ ಈ ಟ್ಯಾಕ್ಸ್ ವೇಕೆಂಟ್ ಲ್ಯಾಂಡ್ ಟ್ಯಾಕ್ಸ್ ಆದ 0.4 ಪರ್‌ಸೆಂಟ್ ಆಫ್ ದಿ ಮಾರ್ಕೆಟ್ ವ್ಯಾಲ್ಯು ಏನಿದೆ, ಅದಕ್ಕಿಂತ ಜಾಸ್ತಿಯಾಗಬಾರದು ಎಂದು ಹೇಳುತ್ತೇವೆ. ಇನ್ನು ಒಂದೆರಡು ಕ್ಲಾಸುಗಳನ್ನು ಹಾಕಿದ್ದೇವೆ. ಅದರ ಬಗ್ಗೆ ಮಾನ್ಯ ಸದಸ್ಯರನೇಕರು ಮಾತನಾಡಿ

ದ್ದಾರೆ. ಈ ಪ್ಲಾನಿಂಗ್ ಅಥಾರಿಟಿಯಿಂದ ಜನರಿಗೆ ಬಹಳ ತೊಂದರೆಯಾಗುತ್ತದೆ, ವಿಳಂಬವಾಗುತ್ತದೆ ಮತ್ತು ಅನಾನುಕೂಲವಾಗುತ್ತದೆ, ಮತ್ತು ಇದನ್ನು ಕೈಬಿಡಬೇಕೆಂದು ಹೇಳಿದ್ದಾರೆ. ಅವರ ಅಭಿಪ್ರಾಯಕ್ಕೆ ಬೆಲೆ ಕೊಟ್ಟು, ಈಗ ಕ್ಲಾಸ್ 10 ರಿಂದ 19ರ ವರೆಗೆ ಏನು ಪ್ಲಾನಿಂಗ್ ಅಥಾರಿಟಿಗೆ ಸಂಬಂಧಪಟ್ಟ ಹಾಗೆ ಇದೆ, ಅವೆಲ್ಲವನ್ನೂ ಒತ್ತಾಯಿಸಬಾರದು ಎನ್ನುವ ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಮತ್ತು ಮಾನ್ಯ ಸದಸ್ಯರನೇಕರು ಮಾತನಾಡುವಾಗ ಸರ್ಕಾರದ ಆಡಳಿತ ಬಂದ ನಂತರ ಏನೂ ಅಭಿವೃದ್ಧಿ ಕಾರ್ಯಗಳು ನಡೆಯಲಿಲ್ಲ ಎಂದು ಹೇಳಿದ್ದಾರೆ. ಆದರೆ ನಾನಾದರೂ ಹೇಳುತ್ತೇನೆ, ಆದ ಕೆಲಸಗಳು ಆಗಿವೆ, ಇವತ್ತು, ಹೊಸ ಹೊಸ ಉದ್ಯಮಗಳು ಆಗುತ್ತಿವೆ, ಸಣ್ಣ ಸಣ್ಣ ಸ್ಥಳಗಳಲ್ಲಿ ರೋಡುಗಳು ಲೈಟುಗಳು, ಅಂಡರ್‌ಗ್ರೌಂಡ್ ಡ್ರೈನೇಜ್ ಕಾರ್ಯಗಳು ಮುಂತಾದ ಕೆಲಸ ಕಾರ್ಯಗಳು ನಡೆದಿವೆ. ಇಷ್ಟಕ್ಕೆ ನಾವು ತೃಪ್ತಿಪಟ್ಟುಕೊಳ್ಳಬೇಕಾಗಿಲ್ಲ. ಇನ್ನೂ ಹೆಚ್ಚಿನ ಸತ್ಕಾರ್ಯಗಳನ್ನು ಒದಗಿಸುವ ಕಾರ್ಯಗಳನ್ನು ಮಾಡಬೇಕಾಗಿದೆ. ಆದರೆ ಒಳ್ಳೆಯ ಕೆಲಸಗಳನ್ನು ಮಾಡಿದರೆ ಒಳ್ಳೆಯ ಕೆಲಸಗಳನ್ನೂ ಮಾಡಿದ್ದಾರೆಂದು ಒಪ್ಪಿಕೊಳ್ಳಬೇಕು. ಆ ದೃಷ್ಟಿಯಿಂದ ಮಾನ್ಯಸದಸ್ಯರ ಅಭಿಪ್ರಾಯಗಳಿಗೆ ಗೌರವ ಕೊಟ್ಟು ನಾನು ಒಪ್ಪಿಕೊಂಡಿದ್ದೇನೆ ಮತ್ತು 10 ರಿಂದ 19ರ ವರೆಗೆ ಇರುವ ಕ್ಲಾಸುಗಳನ್ನು ಬಿಡುವುದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ಒಮ್ಮತದಿಂದ ಇದಕ್ಕೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಮಾನ್ಯ ಮಂತ್ರಿಯವರು ಭ್ರಷ್ಟಾಚಾರ ಮತ್ತು ಲಂಚಗಳನ್ನು ತಡೆಯುವುದಕ್ಕೆ ಕಾರ್ಪೊರೇಷನ್ನನ್ನು ವಿಜಿಲೆನ್ಸ್ ಕಮಿಷನಿನ ವ್ಯಾಪ್ತಿಗೆ ಒಳಪಡಿಸಿದ್ದೇವೆಂದು ಹೇಳಿದರು. ವಿಜಿಲೆನ್ಸ್ ಕಮಿಷನರ್ ಮೈನೂರು ಸ್ಟೇಟಿನಲ್ಲಿ ಇದ್ದಾರೆಯೇ, ಮತ್ತು ಆ ಜಾಗದಲ್ಲಿ ಪರ್ಮನೆಂಟ್ ಆಗಿ ಯಾರನ್ನಾದರೂ ನೇಮಕ ಮಾಡಿದ್ದಾರೆಯೇ?

ಶ್ರೀ ಬಿ. ಎಂ. ಪಾಟೀಲ್.—ವಿಜಿಲೆನ್ಸ್ ಕಮಿಷನರ್ ಯಾರೇ ಇರಲಿ, ಅಥವಾ ಅವರು ಈಗ ಇಲ್ಲದಿದ್ದರೆ ಮುಂದೆ ಬರಬಹುದು. ಆದರೆ ನಾನು ಈ ಕಾರ್ಪೊರೇಷನ್ನಿನ ತನಿಖೆಯ ವ್ಯಾಪ್ತಿಯನ್ನೂ ವಿಜಿಲೆನ್ಸ್ ಕಮಿಷನ್ ಎನ್ನುವ ಸಂಸ್ಥೆಗೆ ಕಾರ್ಯನಿರ್ವಹಣೆಗೆ ವಹಿಸಿದ್ದೇವೆ ಎಂದು ಹೇಳಿದ್ದೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ವಿಜಿಲೆನ್ಸ್ ಕಮಿಷನರ್ ಎನ್ನತಕ್ಕ ಜಾಗ, ಅವರು ರಿಟೈರ್ ಆದಮೇಲೆ ಪರ್ಮನೆಂಟ್ ಆಗಿ ಅದಕ್ಕೆ ಯಾರನ್ನಾದರೂ ನೇಮಕ ಮಾಡಿದ್ದಾರೆ; ಹಾಗಿದ್ದರೆ ಅವರು ಯಾರು?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯಮಂತ್ರಿಗಳು). — ಈ ಕಾರ್ಪೊರೇಶನ್ ಬಿಲ್ಲಿಗೂ ವಿಜಿಲೆನ್ಸ್ ಕಮಿಷನರ ನೇಮಕಕ್ಕೂ ಏನು ಸಂಬಂಧ ಇದೆ ಎಂದು ನನಗೆ ಗೊತ್ತಾಗಿಲ್ಲ. ಮಾನ್ಯ ಸದಸ್ಯರಿಗೆ ಅದರ ಮಾಹಿತಿ ಬೇಕಾದರೆ, ಅದನ್ನು ಪ್ರತ್ಯೇಕವಾಗಿ ಕೇಳಿದರೆ ಹೇಳಬಹುದು.

ಶ್ರೀ ಎಸ್. ಎಸ್. ಅರಕೇರಿ.—ಸ್ವಾಮಿ, ಬೆಂಗಳೂರು ನಗರದಲ್ಲಿ ಅನೇಕ ಸ್ಲಮ್ ಏರಿಯಾ ಪ್ರದೇಶಗಳಲ್ಲಿ ಹರಿಜನರು ಇದ್ದಾರೆ. ಅವರ ಹೆಸರುಗಳನ್ನು ಬೆಂಗಳೂರು ಕಾರ್ಪೊರೇಷನ್ನಿನ ವೋಟರ್ಸ್ ಲಿಸ್ಟಿನಲ್ಲಿ ನಮೂದು ಮಾಡಿಲ್ಲ, ಅವರು ನಾವಾರು 60-70 ವರ್ಷಗಳಿಂದ ಆಯಾಯಾ ಸ್ಲಮ್ ಏರಿಯಾದ ಜಾಗಗಳಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ವಾಸಮಾಡುತ್ತಿದ್ದಾರೆ. ಅವರಿಗೆ ವಸತಿಗಳನ್ನು ಒದಗಿಸಲು ಒಂದು ಸ್ಪೆಷಲ್ ಸ್ಕೀಮ್ ತಯಾರು ಮಾಡಬೇಕು. ಅವರಿಗಾಗಿ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್‌ಗಳನ್ನು ಕಟ್ಟುವುದು ಬೇಡಾ ಎಂದು ನಾನು ಮನವಿ ಮಾಡಿದ್ದೆ. ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ.

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ವೋಟರ್ಸ್ ಲಿಸ್ಟಿನಲ್ಲಿ ಬಹಳ ತಪ್ಪುಗಳು ಇವೆಯೆಂದು ಹೇಳಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ತಿದ್ದುಪಡಿ ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ. ಸ್ಲಮ್ ಏರಿಯಾದಲ್ಲಿರತಕ್ಕವರಿಗೆ ಎಲ್ಲಿ ಮಲ್ಟಿ ಸ್ಟೋರೀಡ್ ಬಿಲ್ಡಿಂಗ್ ಕಟ್ಟಬೇಕೋ ಅಲ್ಲಿ ಬಿಲ್ಡಿಂಗ್ ಕಟ್ಟುತ್ತಾರೆ, ಎಲ್ಲಿ ಅವರಿಗೆ ನಿವೇಶನಗಳನ್ನು ಒದಗಿಸಬೇಕೋ ಅಲ್ಲ ನಿವೇಶನಗಳನ್ನು ಒದಗಿಸುತ್ತಾರೆ.

ಶ್ರೀ ಎಂ. ನಾಗಪ್ಪ.—ಡಿಸೆಂಬರ್ ತಿಂಗಳಲ್ಲಿ ಖಚಿತವಾಗಿ ಬೆಂಗಳೂರು ಕಾರ್ಪೊರೇಷನ್ ಚುನಾವಣೆಯನ್ನು ನಡೆಸುತ್ತೇವೆ ಎಂದು ಈ ಸಭೆಗೆ ಆಶ್ವಾಸನೆ ಕೊಡುತ್ತೀರಾ?

ಶ್ರೀ ಬಿ. ಎಂ. ಪಾಟೀಲ್.—ಚುನಾವಣೆಯನ್ನು ಡಿಸೆಂಬರ್ ತಿಂಗಳಿನಲ್ಲಿ ಮಾಡಬೇಕು ಎಂದು ನಿರ್ಧಾರವನ್ನು ತೆಗೆದುಕೊಂಡಿದ್ದೇವೆ, ಆ ಉದ್ದೇಶ ಸರ್ಕಾರಕ್ಕೆ ಇದೆ ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.—ಹಿಂದೆ ಮಾನ್ಯ ಮಂತ್ರಿಗಳು ಸ್ಪೆಸಿಫಿಕ್ ಚಾರ್ಜಸ್ ಯಾವು ದಾದರೂ ಕೊಟ್ಟರೆ ಅಂಥಾ ಚಾರ್ಜುಗಳಿಗೆ ಸಂಬಂಧಪಟ್ಟಹಾಗೆ ಯಾರನ್ನೂ ಸರ್ಕಾರದವರು ಷೀಲ್ಡ್ ಮಾಡುವುದಿಲ್ಲ ಆಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. ಗದಗ್ ನಗರಸಭೆಯಲ್ಲಿ ಭಯಂಕರ ಸ್ವರೂಪದ ಭ್ರಷ್ಟಾಚಾರಗಳು ನಡೆದುದ್ದರ ಬಗ್ಗೆ ಸ್ಪೆಸಿಫಿಕ್ ಆಗಿ ಚಾರ್ಜುಗಳನ್ನು ಅನೇಕ ಜನ ನಾನೂ ಕೂಡ ಸೇರಿಕೊಂಡು ಮಾನ್ಯ ಮಂತ್ರಿಗಳಿಗೆ ಅವರ ಚೇಂಬರ್‌ನಲ್ಲಿ ಕೊಟ್ಟು ಸುಮಾರು ಒಂದೂವರೆ ವರ್ಷ ಆಯಿತು, ಆದರೆ ಇಲ್ಲಿಯವರೆಗೂ ಆ ಬಗ್ಗೆ ಎನ್‌ಕ್ವೈರಿ ಮಾಡತಕ್ಕ ಸೌಜನ್ಯವನ್ನು ಮಾನ್ಯ ಮಂತ್ರಿಗಳು ತೋರಿಸಲಿಲ್ಲ. ತಪ್ಪು ಮಾಡಿದಂತಹ ಅಧಿಕಾರಿಗೆ ಪ್ರಮೋಷನ್ ಕೊಟ್ಟಿದ್ದಾರೆ; ನಿಮ್ಮ ಬಗ್ಗೆ ನನಗೆ ಚೆರೋ ಅಭಿಪ್ರಾಯ ಇತ್ತು; ಅದು ಬದಲಾವಣೆಯಾಗ ಬೇಕಾದರೆ ನೀವೇ ಕಾರಣ. ನಾವು ಕೊಟ್ಟಂತಹ ಚಾರ್ಜಸ್ ಬಗ್ಗೆ ಇದುವರೆಗೂ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ !

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಕೆ. ಎಚ್. ಪಾಟೀಲರು ಏನು ಅಲಗೇಷನ್ ಮಾಡಿದ್ದಾರೆ ಅದನ್ನು ಎನ್‌ಕ್ವೈರಿ ಮಾಡುವುದಕ್ಕೆ ಕಳುಹಿಸಿದೆ. ಸಂಬಂಧಪಟ್ಟ ಅಧಿಕಾರಿಗಳಿಂದ ಆ ಬಗ್ಗೆ ರಿಪೋರ್ಟ್ ಬಂದನಂತರ ಸಂಬಂಧಪಟ್ಟ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ನಾನು ಈಗಾಗಲೇ ಹೇಳಿದ್ದೇನೆ. ವೈಯಕ್ತಿಕವಾಗಿ ಯಾರನ್ನೂ ಷೇಲ್ಡ್ ಮಾಡಬೇಕೆಂದು ಉದ್ದೇಶವನ್ನು ಇಟ್ಟುಕೊಂಡಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಮಂತ್ರಿಗಳು ಕಾರ್ಪೊರೇಷನ್‌ನಲ್ಲಿ ಕರಪ್‌ಷನ್ ಇಲ್ಲ ಎಂದು ಹೇಳಿದರು. ಮತ್ತು ಆ ಬಗ್ಗೆ ಸಾಕಷ್ಟು ಪ್ರೂಫ್ ಇಲ್ಲ ಎಂದು ಹೇಳಿದರು, ಮಾನ್ಯ ಮಂತ್ರಿಗಳಿಗೆ ಬೇಕಾದರೆ ಇವೊತ್ತು 100 ಲಂಚದ ಆವಾದನೆಗಳ ಪಟ್ಟಿಯನ್ನು ಕೊಡುತ್ತೇನೆ. ಉದಾಹರಣೆಗೆ ಹೇಳುವುದಾದರೆ ಬೆಂಗಳೂರು ಸಿಟಿಯ ಉಕ್ಕಡದಲ್ಲಿ ಮೆಮೋ ನಂಬರ್ 1182 ತಾ. 9-2-1970 ರಂದು ಮೆಮೋ ಪುಸ್ತಕದಲ್ಲಿ 90ನೇ ಪೇಜಿನಿಂದ 97ನೇ ಪೇಜಿನವರೆಗೂ ರಶೀತಿ ಬರೆದದ್ದನ್ನು ಹರಿದುಹಾಕಿದ್ದಾರೆ. ಸುಮಾರು 50 ಸಾವಿರ ರೂಪಾಯಿಗಳ ಎಲೆಕ್ಟ್ರಿಕ್ ಗುಡ್ಸ್ ಅನ್ನು ಆಕ್ಸ್ಮಾಯ್ ಕೊಡದೆ ತೆಗೆದುಕೊಂಡು ಬಂದಿದ್ದಾರೆ. ಆದಕ್ಕಾಗಿ ಒಂದು ಸಾವಿರ ರೂಪಾಯಿಗಳ ಲಂಚವನ್ನು ಕೊಟ್ಟಿದ್ದಾರೆ. ಇದೇ ರೀತಿ ಇನ್ನೊಂದು ಕಡೆ ಮೆಮೋ ಪುಸ್ತಕದಲ್ಲಿ ಪೇಜ್ 92 ರಿಂದ 97ನೇ ಪೇಜಿನವರೆಗೆ ಹರಿದುಹಾಕಿದ್ದಾರೆ. ಆ ಬಗ್ಗೆ ಒಂದು ಸಾವಿರ ರೂಪಾಯಿಗಳ ಲಂಚವನ್ನು ತೆಗೆದುಕೊಂಡಿದ್ದಾರೆ. ಯಾರು ಲಂಚ ಕೊಟ್ಟಿದ್ದಾರೆಯೋ ಅವರೇ ನನಗೆ ಇದನ್ನು ಕೊಟ್ಟು ಹೋಗಿದ್ದಾರೆ. ಈ ರೀತಿಯಾಗಿ ಕಾರ್ಪೊರೇಷನ್‌ನಲ್ಲಿ ಲಂಚ ಎನ್ನುವುದು ತಾಂಡವವಾಡುತ್ತಿದೆ, ಆದ್ದರಿಂದ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಮೇಲೆ ಸೂಕ್ತ ಕ್ರಮವನ್ನು ತೆಗೆದು ಕೊಳ್ಳುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರಾದ ಶ್ರೀಮಾನ್ ಶಾಮಣ್ಣನವರು ಹಿಂದೆ ಸ್ಪೆಸಿಫಿಕ್ ಆದ 2-3 ಕೇಸುಗಳನ್ನೇನು ನಮಗೆ ಕೊಟ್ಟಿದ್ದಾರೆ ಅವುಗಳನ್ನು ನಾವು ವಿಜಿರೆನ್ಸ್ ಕಮಿಷನ್ನಿಗೆ ಕಳುಹಿಸಿದ್ದೇವೆ. ಒಂದು ಅಪ್ಲಿಕೇಷನ್ ಬರೆದು ಅದರ ಜೊತೆಯಲ್ಲಿ ಈ ಇನ್‌ಫರ್ ಮೇಷನ್‌ಗಳನ್ನು ಕೊಟ್ಟರೆ ಎನ್‌ಕ್ವೈರಿ ಮಾಡಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ.—ಸ್ವಾಮಿ, ವಿಜಿರೆನ್ಸ್ ಕಮಿಷನ್ನಿನಿಂದ ಏನು ಕೆಲಸ ಆಗುವುದಿಲ್ಲ. ವಿಜಿರೆನ್ಸ್ ಕಮಿಷನ್ನಿನಿಂದ ಏನಾಗಿದೆ, ಎಷ್ಟು ಜನಗಳಿಗೆ ಶಿಕ್ಷೆಯಾಗಿದೆ ಎಂಬುಡನ್ನು ನೋಡಿದರೆ ಅದು ಇರುವುದಕ್ಕಿಂತ ಇಲ್ಲದೇ ಇರುವುದು ಉತ್ತಮ ಎನಿಸುತ್ತದೆ. ಲಂಚಗುಳಿತನ ನಡೆಯುತ್ತಲೇ ಇದೆ. ಈಗ ಏನಾಗಿದೆ ಎಂದರೆ ಎಲ್ಲಾ ಮಾಮೂಲು ಪದ್ಧತಿ ಬಂದಿದೆ. ಇದನ್ನು ತಪ್ಪಿಸಬೇಕು, ಇಲ್ಲದಿದ್ದರೆ ಇಂತಿಂಥಾ ಕೆಲಸಕ್ಕೆ ಇಷ್ಟಿಷ್ಟು ಎಂದು ಒಂದು ಪರ್ಸೆಂಟೇಜ್ ಫಿಕ್ಸ್ ಮಾಡಿಬಿಡಿ. ತಾವು ಕೃಷ್ಣರಾಜೇಂದ್ರ ಮಾರ್ಕೆಟ್ಟಿಗೆ ಭೇಟಿ ಕೊಟ್ಟಿದ್ದಿರಿ ಎಂದು ನಾನು ಕೇಳಿದೆ. ತಾವು ಬೆಳಿಗ್ಗೆ ಮಾರ್ಕೆಟ್ಟಿಗೆ ಭೇಟಿ ಕೊಡುತ್ತೇನೆ ಎಂದು ಪ್ರೋಗ್ರಾಮ್ ಕೊಟ್ಟು ಅಲ್ಲಿಗೆ ಭೇಟಿ ಕೊಟ್ಟಿದ್ದೀರಿ ಎಂದು ಕಾಣುತ್ತದೆ. ಆ ದಿವಸ ವ್ಯಾಪಾರಸ್ಥರಿಗೆ 50 ಸಾವಿರ ರೂಪಾಯಿ ಲಾಸ್ ಆಗಿದೆ. ಆ ದಿವಸ ಅವರು ಏನೇನು ಅನ್ಯಾಯಗಳನ್ನು ಮಾಡುತ್ತಿದ್ದರೋ ಅದನ್ನೆಲ್ಲಾ ಮಾಡುವುದಕ್ಕೆ ಆಗಲಿಲ್ಲ. ಆದ್ದರಿಂದ 50 ಸಾವಿರ ರೂಪಾಯಿ ಲಾಸ್ ಆಯಿತು. ತಾವು ಮಾರ್ಕೆಟ್ಟಿಗೆ ಹೋಗಬೇಕಾದರೆ ಪ್ರೋಗ್ರಾಮ್ ಕೊಡದೆ ಸುಫ್ತಿಯಲ್ಲಿ ಹೋಗಿ ನೋಡಿ ಆಲ್ಲಿ ಎಷ್ಟು ಲಂಚ ನಡೆಯುತ್ತದೆ ಎಂಬುದು ತಮಗೆ ಗೊತ್ತಾಗುತ್ತದೆ.

6-00 P. M.

ಶ್ರೀ ಬಿ. ಎಂ. ಪಾಟೀಲ್.—ತನಿಖೆ ಮಾಡಲು ಪಿಜಿರೆನ್ಸ್ ಕಮಿಷನ್ನಿಗೆ ವಹಿಸುವುದು ಕೂಡ ಸರಿಯಲ್ಲ ಎಂದು ಮಾನ್ಯ ಸಿದ್ದವೀರಪ್ಪನವರು ಹೇಳುತ್ತಾರೆ. ಯಾವ ರೀತಿ ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆ ಮಾನ್ಯ ಸದಸ್ಯರು ಏನಾದರು ಸಲಹೆಗಳನ್ನು ಕೊಟ್ಟರೆ ಅದನ್ನು ಪರಿಶೀಲನೆ ಮಾಡಬಹುದು. ಏಕೆಂದರೆ ಅವರು ಕೂಡ ಹಿಂದೆ ಮಂತ್ರಿಗಳಾಗಿದ್ದರು. ಅವರಿಗೂ ಕೂಡ ಆಡಳಿತ ನಡೆಸಿದ ಅನುಭವವಿದೆ. ಇಂತಹ ಸಂದರ್ಭದಲ್ಲಿ ಅವರು ಮಂತ್ರಿಗಳಾಗಿದ್ದಾಗ ಏನು ಕ್ರಮ ತೆಗೆದುಕೊಳ್ಳುತ್ತಿದ್ದರೋ ನನಗೆ ಗೊತ್ತಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಈಗ ಅಸೆಂಬ್ಲಿಯ ಮತದಾರರ ಪಟ್ಟಿಯನ್ನೇ ಕಾರ್ಪೊರೇಷನ್ ಚುನಾವಣೆಗೂ ಉಪಯೋಗಿಸಿಕೊಳ್ಳುವುದರಲ್ಲಿ ನಮ್ಮ ಅಭ್ಯಂತರವಿಲ್ಲ. ಮತ್ತು ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈಗ ಕೆಲವು ಡಿವಿಜನ್‌ಗಳಲ್ಲಿ 30 ಸಾವಿರ ಮತದಾರರು ಇದ್ದರೆ ಮತ್ತೆ ಕೆಲವು ಕಡೆ 6 ರಿಂದ 10 ಸಾವಿರದವರೆಗೆ ಮತದಾರರು ಇವ್ವಾರೆ. ಈ ವ್ಯತ್ಯಾಸವನ್ನು ಸರಿಪಡಿಸಿ ಮತದಾರರ ಸಂಖ್ಯೆ ಎಲ್ಲ ಡಿವಿಜನ್‌ಗಳಲ್ಲಿಯೂ ಒಂದೇ ರೀತಿ ಇರುವಂತೆ ಕ್ಷೇತ್ರಗಳ ಪುನರ್ವಿಂಗಡಣೆ ಮಾಡಬೇಕೆಂದು ನಾನು ಮತ್ತು ಶ್ರೀ ಶಾಮಣ್ಣನವರು ಕಳೆದ ಎರಡು ವರ್ಷಗಳಿಂದಲೂ ಕೂಡ ಕೇಳಿಕೊಳ್ಳುತ್ತಿದ್ದೇವೆ. ಅದಕ್ಕೆ ಮಾನ್ಯ ಮಂತ್ರಿಗಳು ಆ ರೀತಿ ಮಾಡಬೇಕಾದರೆ ಕಾರ್ಪೊರೇಷನ್ ಆಕ್ಟ್‌ಗೆ ತಿದ್ದುಪಡಿ ತಂದು ಬದಲಾವಣೆ ಮಾಡಬೇಕಾಗುತ್ತದೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಇದುವರೆಗೆ ಈ ಬಗ್ಗೆ ತಿದ್ದುಪಡಿಯನ್ನು ತರಲಲ್ಲ. ಈಗಲಾದರೂ ಕೂಡ ಈ ಬಗ್ಗೆ ಏನಾದರು ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಬಿ. ಎಂ. ಪಾಟೀಲ್.—ಈ ವಿಚಾರದಲ್ಲಿ ತಜ್ಞರ ಅಭಿಪ್ರಾಯವನ್ನು ಮತ್ತು ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೇಳಿದಾಗ ಅವರು 1961ನೇ ಸೆನ್ಸಸ್ ಆಧಾರದ ಮೇಲೆ ತಿದ್ದುಪಡಿ ಮಾಡಬೇಕಾಗುತ್ತದೆ, ಈಗಿನ ಸೆನ್ಸಸ್ ಪ್ರಕಾರ ಮಾಡುವುದಕ್ಕೆ ಬರುವುದಿಲ್ಲ ಒಂದು ಪಕ್ಷ ತಿದ್ದುಪಡಿ ಮಾಡಬೇಕಾದರೆ ಕಾನೂನು ಪ್ರಕಾರ 71ರ ಸೆನ್ಸಸ್ ಮುಗಿದಮೇಲೆ ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಬೇಗನೆ ಚುನಾವಣೆ ನಡೆಸಬೇಕೆಂದು ಎಲ್ಲರೂ ಒತ್ತಾಯ ಮಾಡುತ್ತಿರುವುದರಿಂದ ಈಗ 1961ನೇ ಸೆನ್ಸಸ್ ಪ್ರಕಾರವೇ ಚುನಾವಣೆಯನ್ನು ಮಾಡಬೇಕೆಂದು ತೀರ್ಮಾನ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—1961ನೇ ಇಸವಿಯ ಸೆನ್ಸಸ್ ಪ್ರಕಾರವೇ ಕೆಲವು ಡಿವಿಜನ್‌ಗಳಲ್ಲಿ 30 ಸಾವಿರ ಮತದಾರರು ಇದ್ದರೆ ಮತ್ತೆ ಕೆಲವು ಡಿವಿಜನ್‌ಗಳಲ್ಲಿ 6 ಸಾವಿರ ಮತದಾರರು ಇದ್ದಾರೆ. ಮತದಾರರ ಸಂಖ್ಯೆ ಎಲ್ಲ ಡಿವಿಜನ್‌ಗಳಲ್ಲಿಯೂ ಕೂಡ ಒಂದೇ ರೀತಿ ಇರುವಂತೆ 1961ನೇ ಸೆನ್ಸಸ್ ಪ್ರಕಾರವೇ ತಿದ್ದುಪಡಿ ತರುವುದಕ್ಕೆ ಸಾಧ್ಯವಿಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಆ ಬಗ್ಗೆ ಈಗ ತಿದ್ದುಪಡಿ ತರುವುದಕ್ಕಾಗುವುದಿಲ್ಲ. ಈ ವಿಚಾರದಲ್ಲಿ ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡಿದ್ದೇವೆ. ಮತದಾರರು ಎಷ್ಟು ಜನ ಆಯಾ ಡಿವಿಜನ್‌ನಲ್ಲಿ ಇದ್ದಾರೆ ಎಂಬುದನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿಲ್ಲ. ಅಸೆಂಬ್ಲಿ ಮತದಾರರ ಪಟ್ಟಿಯ ಪ್ರಕಾರ ಡಿವಿಜನ್‌ಗಳನ್ನು ಮಾಡಲಾಗಿದೆ. ಜನಸಂಖ್ಯೆ ಆಧಾರದಮೇಲೆ ಡಿವಿಜನ್‌ಗಳನ್ನು ಮಾಡಬೇಕೆಂದರೆ 1971ರ ಸೆನ್ಸಸ್ ಮುಗಿಯುವವರೆಗೂ ಕೂಡ ಕಾಯಬೇಕಾಗುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಮಾನ್ಯ ಮಂತ್ರಿಗಳು ಈಗ ಕಾರ್ಪೊರೇಷನ್ನಿನಲ್ಲಿ ಆಡಳಿತ ಬಹಳ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದರು. ಅಲ್ಲಿಯ ಒಬ್ಬ ಜೂನಿಯರ್ ಇಂಜಿನಿಯರ್‌ಗೆ ಸೀನಿಯಾರಿಟಿ ಇಲ್ಲದೆ ಜಿ. ಒ. ಇಸ್ಯೂ ಮಾಡಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ನೇಮಕ ಮಾಡಿರುವುದು ನಿಜವಲ್ಲವೇ ! ಈ ಬಗ್ಗೆ ಕೆಲವರು ಹೈಕೋರ್ಟಿಗೆ ಹೋಗಿ ಸ್ಟೇ ಆರ್ಡರ್ ತಂದಿರುವುದು ನಿಜವಲ್ಲವೇ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರು ಸ್ಪೆಸಿಫಿಕ್ ಆಗಿ ಕೇಳುತ್ತಿದ್ದಾರೆ. ಕಾರ್ಪೊರೇಷನ್ ಅಧಿಕಾರಿಗಳಾಗಲೀ ಅಥವಾ ಸರ್ಕಾರವಾಗಲೀ ಮಾಡಿದಂತಹ ಆರ್ಡರ್‌ಗಳು ಕೆಲವರಿಗೆ ತೃಪ್ತಿಯಾಗದಿದ್ದರೆ ಅಂತಹವರು ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿದೆ. ಸರ್ಕಾರ ಮಾಡಿದ್ದೇ ಸರಿ ಎಂದು ನಾನು ಹೇಳುವುದಿಲ್ಲ. ಕೆಲವು ಸಲ ಕೆಳಕೋರ್ಟಿನ ತೀರ್ಮಾನವನ್ನು ಹೈಕೋರ್ಟಿನವರು ಒಪ್ಪುವುದಿಲ್ಲ. ಮತ್ತೆ ಕೆಲವು ಸಲ ಹೈಕೋರ್ಟಿನ ತೀರ್ಮಾನವನ್ನು ಸುಪ್ರೀಂ ಕೋರ್ಟಿನವರು ಒಪ್ಪುವುದಿಲ್ಲ. ಆದಕಾರಣ ಸರ್ಕಾರದವರು ತಮಗೆ ಸರಿಯೆಂದು ಕಂಡುಬಂದಿದ್ದನ್ನು ಮಾಡುತ್ತಾರೆ. ಅದು ಕೆಲವರಿಗೆ ಸಮಾಧಾನವಾಗದಿದ್ದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳಲು ಬೇರೆ ಬೇರೆ ವಿಧಾನಗಳಿವೆ. ಆ ವಿಧಾನಗಳನ್ನು ಅನುಸರಿಸಬಹುದು.

ಶ್ರೀ ಪಾಟೀಳ್ ನಾಗರಾಜ್.—ಸ್ವಾಮಿ, ಎರಡು ವರ್ಷದ ಹಿಂದೆ ಶ್ರೀ ಚೆನ್ನಯ್ಯ ಎಂಬಾತನು 12,500 ರೂಪಾಯಿಗಳನ್ನು ತಿಂದುಹಾಕಿದ ಎಂಬ ಕಾರಣದ ಮೇಲೆ ಕಾರ್ಪೊರೇಷನ್ನಿನ ಅಧಿಕಾರಿಗಳು ಆತನನ್ನು ಡಿಸ್‌ಮಿಸ್ ಮಾಡಿ ಈಗ ಮತ್ತೆ ಆತನನ್ನು ಕೆಲಸಕ್ಕೆ ಸೇರಿಸಿಕೊಂಡು ಮೊದಲಗಿಂತ ಹೆಚ್ಚಿನ ದುಡ್ಡನ್ನು ತಿನ್ನುವುದಕ್ಕೆ ಅನುಕೂಲವಾದಂಥ ಸ್ಪೋರ್ಟ್ಸ್‌ಗೆ ಹಾಕಿದ್ದಾರೆ. ಇದು ನಿಜವಲ್ಲವೇ? ಅದೇ ಬೇರೆ ಒಬ್ಬ ನೌಕರ ಕೇವಲ 2 ರೂಪಾಯಿ ಲಂಚ ತೆಗೆದುಕೊಂಡ ಎಂಬ ಕಾರಣದಿಂದ ಡಿಸ್‌ಮಿಸ್ ಮಾಡಿರುವುದು ಸಹ ನಿಜವಲ್ಲವೇ? ಕಾರ್ಪೊರೇಷನ್ ಗಡಿಯಾರ ಕೆಟ್ಟು ಹೋಗಿರುವುದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಾ ಎಂಬ ಬಗ್ಗೆಕೂಡ ಕಾರಣ ಕೊಡಬೇಕು?

ಶ್ರೀ ಬಿ. ಎಂ. ಪಾಟೀರ್.—ಮಾನ್ಯ ಸದಸ್ಯರು ಯಾವುದೋ ಒಂದು ಕೇಸಿನ ಬಗ್ಗೆ ಕೇಳುತ್ತಿದ್ದಾರೆ. ಆ ವಿಚಾರದ ಬಗ್ಗೆ ಮಾಹಿತಿ ನನ್ನ ಹತ್ತಿರ ಈಗ ಇಲ್ಲ. ಕಾರ್ಪೊರೇಷನ್ ಅಧಿಕಾರಿಗಳು ಯಾರಮೇಲಾದರೂ ಕ್ರಮ ತೆಗೆದುಕೊಂಡರೆ ಸಂಬಂಧಪಟ್ಟವರು ಬೇಕಾದರೆ ಕೋರ್ಟಿಗೆ ಹೋಗುವುದಕ್ಕೆ ಅವಕಾಶವಿದೆ. ಕೋರ್ಟಿನಲ್ಲಿ ಏನು ತೀರ್ಮಾನವಾಗುತ್ತದೋ ಆ ತೀರ್ಮಾನದ ಪ್ರಕಾರ ನಾವು ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಪ್ರಭಾಕರ್.—1961ರ ಸೆನ್‌ಸಸ್ ಪ್ರಕಾರ ವಾರ್ಡ್‌ಗಳನ್ನು ವಿಂಗಡಿಸಿದ್ದೇವೆ, ಡಿಸೆಂಬರ್‌ನಲ್ಲಿ ಚುನಾವಣೆ ನಡೆಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಅದು ಸಾಧುವಾದುದು. ಪಾಪ್ಯುಲೇಷನ್ ಬೆಸಿಸ್ ಮೇಲೆ ವಾರ್ಡ್‌ಗಳನ್ನು ವಿಂಗಡಿಸಿ ಚುನಾವಣೆ ನಡೆಸಿದರೆ ಸ್ಲಮ್ ಏರಿಯಾ ಇರುವ ಕಡೆ ಜನಸಂಖ್ಯೆ ಜಾಸ್ತಿಯಿರುತ್ತದೆ. ಸ್ಲಮ್ ಏರಿಯಾ ಇರುವ ಕಡೆ ಮತದಾರರ ಹೆಸರನ್ನು ಕೆಲವು ಸಲ ಸೇರಿಸದೆ ಬಿಟ್ಟುಬಿಡುತ್ತಾರೆ. ಇದರಿಂದ ಮೂಲಭೂತ ವಾದಂಥ ಅವರ ಹಕ್ಕು ಹೊರಟುಹೋಗುತ್ತದೆ. ಆದಕಾರಣ ಅವರ ಹಕ್ಕು ಖೋತಾ ಆಗದಂತೆ ಎಲ್ಲರ ಹೆಸರನ್ನು ಕೂಡ ಚುನಾವಣಾ ಪಟ್ಟಿಯಲ್ಲಿ ಸೇರಿಸಲು ತಕ್ಕ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ಎಂ. ಪಾಟೀರ್.—ಯಾರಿಗೆ ಓಟು ಮಾಡುವ ಹಕ್ಕು ಇರುತ್ತದೋ ಅಂತಹವರ ಹೆಸರನ್ನೆಲ್ಲಾ ಓಟರ್ಸ್ ಲಿಸ್ಟ್‌ನಲ್ಲಿ ಸೇರಿಸಲಾಗಿರುತ್ತದೆ. ಯಾರ ಹೆಸರನ್ನು ಕೂಡ ಬಿಡಬೇಕೆಂಬ ಉದ್ದೇಶ ನಮಗೆ ಇಲ್ಲ. ಒಂದು ಪಕ್ಷ ಯಾರದಾದರೂ ಹೆಸರು ಇಲ್ಲದಿದ್ದರೆ ಅಂತಹವರು ಅಪ್ಲಿಕೇಷನ್ ಹಾಕಿಕೊಳ್ಳಬಹುದು. ಈ ಬಗ್ಗೆ ಯಾವ ವಿಧಾನ ಅನುಸರಿಸಬೇಕು ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ಆದ್ದರಿಂದ ಆ ಬಗ್ಗೆ ಏನೂ ಹೇಳುವುದಿಲ್ಲ.

Mr. SPEAKER.—As per the procedure. I will have to put the Resolution to the House. The resolution was moved by the Hon. Member Mr. Nagappa. The question is :

"That this House disagrees with Ordinance No. III of 1970—the City of Bangalore Municipal Corporation Ordinance 1970, issued by the Governor of Mysore on 9-6-1970.

The motion was negatived.

Mr. SPEAKER.—I shall put the consideration motion :

The question is :

"That the City of Bangalore Municipal Corporation (Amendment) Bill, 1970, be taken into consideration".

The motion was adopted.

Sri M. S. KRISHNAN.— I had given a motion for referring to a Select Committee.

Mr. SPEAKER.— There are two motions, one is sent by Sri T. R. Shamanna regarding constitution of a Joint Select Committee. That is in order. I shall put it to the House.

Sri T. R. SHAMANNA.— In view of the fact that the Hon. Minister has kindly agreed to see that all provisions affecting the citizens of Bangalore will not be pressed and they will be omitted and in view of the fact that the tax on vacant sites will not exceed in any case more than ·4 per cent, I wish to withdraw my resolution. Futher, he has definitely given an assurance that elections will be held in December. Therefore, on that account as a gesture, I withdraw my resolution.

Sri M. S. KRISHNAN.— I must also say the same thing because we had a discussion with the Minister who has been kind enough to accept some of the amendments though not in letter at least in spirit and he has tried to meet the difficulties that we might face in regard to planning authority and certificates to be produced and also in regard to tax, and that is why, I am not pressing.

Mr. SPEAKER.—We shall sit for another 15 minutes and finish the Bill. I shall now put the Clause to the vote.

CLAUSE 2

Mr. SPEAKER.— The question is.

" That Cluse 2 do stand part of the Bill ".

The motion was negatived.

Clause 2 was deleted from the Bill.

CLAUSE 3

Mr. SPEAKER.— The question is.

" That clause 3 do stand part of the Bill ".

The motion was adopted.

Clause 3 was added to the Bill.

CLAUSE 4

Mr. SPEAKER.—The question is :

"That Clause 4 do stand part of the Bill".

There is an amendment.

Sri T. R. SHAMANNA.—I am not pressing it, Sir.

Mr. SPEAKER.—Then I shall put it to vote. The question is :

"That clause 4 do stand part of the Bill".

The motion was adopted.

Clause 4 was added to the Bill.

CLAUSE 5

Mr. SPEAKER.— The question is :

" That Clause 5 do stand part of the Bill "

The motion was adopted.

Clause 5 was added to the Bill.

CLAUSE 6

Mr. SPEAKER.— The question is :

" That Clause 6 do stand part of the Bill ".
There are amendments.

Sri M. NAGAPPA.— I move :

" That the following proviso shall be substituted for the existing proviso to the proposed sub-section (2) of Section 99 :

Provided that the limits of villages included after 1st day of November 1956 in the limits of the City of Bangalore Municipal Corporation, the Property Tax shall be levied not more than five per cent of the annual value of the buildings and lands."

Mr. SPEAKER.—Amendment moved :

" That the following proviso shall be substituted for the existing proviso to the proposed sub-section (2) of Section 99 :

Provided that the limits of Villages included after 1st day of November, 1956 in the limits of the City of Bangalore Municipal Corporation, the Property Tax shall be levied not more than five per cent of the annual value of the buildings and lands."

ಶ್ರೀ ಎಂ. ನಾಗಪ್ಪ.—ಸ್ಪೀಕರ್ ಸ್ವಾಮೀ, ನಾನು ಮೊದಲು ಬಿಲ್ಲಿನ ಮೇಲೆ ಮಾತಾಡುವಾಗಲೇ ಇಂತಹ ಒಂದು ತಿದ್ದುಪಡಿ ಅವಶ್ಯಕವಾಗಿದೆ ಎಂದು ಹೇಳಿದ್ದೆ. ಅದರಂತೆ ನಾನು ಇಲ್ಲಿ ನನ್ನ ತಿದ್ದುಪಡಿ ತಂದು ಸರಕಾರ ಇದನ್ನು ಒಪ್ಪಬೇಕೆಂದು ಕೇಳುತ್ತಿದ್ದೇನೆ. ಇದಕ್ಕೆ ಕಾರಣ ಈಗಿರುವಂತೆ ಇದ್ದರೆ ಅಧಿಕಾರಿಗಳು ಇದರಲ್ಲಿ ದುರುಪಯೋಗ ಮಾಡಿಕೊಳ್ಳಲು ಅವಕಾಶವಾಗುತ್ತದೆ, ಮತ್ತು ಇದರಲ್ಲಿ ಅವಧಿ ನಿರ್ದಿಷ್ಟವಾಗಿ ಹೇಳಿಲ್ಲ. ಅದಕ್ಕಾಗಿ ನಾನು ಇಲ್ಲಿ 1-11-1956 ಅದನಂತರ ಯಾವ ಯಾವ ಹಳ್ಳಿಗಳು ಕಾರ್ಪೊರೇಷನ್‌ಗೆ ಬಂದು ಸೇರಿವೆಯೋ ಅಂತಹ ಹಳ್ಳಿಗಳಿಗೆ ಎಲ್ಲ ಸೌಕರ್ಯಗಳನ್ನೂ ಕೊಟ್ಟಮೇಲೆ ಇಲ್ಲಿ ಪ್ರಾಪರ್ಟಿ ಟ್ಯಾಕ್ಸ್ ಹಾಕುವಾಗ ಶೇಕಡಾ ಐದರಷ್ಟು ವಾರ್ಷಿಕ ಆದಾಯದಮೇಲೆ ಹಾಕಬೇಕೆಂದು ಸೂಚಿಸಿದ್ದೇನೆ. ಇಂತಹ ಒಂದು ವಿತಿ ಇದ್ದರೆ ಜನಕ್ಕೂ ಅನುಕೂಲವಾಗುತ್ತದೆ, ಇಲ್ಲದಿದ್ದರೆ ಇದರಲ್ಲಿ ಅನ್‌ಸೋಷಿಯರ್ ಎಲಿಮೆಂಟ್ಸುಗಳು ಬರಲು ಅಕಾಶವಾಗುತ್ತದೆ. ಇದನ್ನು ಸರಿಯಾದ ರೀತಿಯಲ್ಲಿ ಮಾಡಲು ಇಂತಹ ತಿದ್ದುಪಡಿ ಅವಶ್ಯಕ ಎಂದು ತಂದಿದ್ದೇನೆ. ಇದರಿಂದ ಅಧಿಕಾರಿಗಳು ದುರುಪಯೋಗ ಮಾಡುವುದೂ ಸಾಕಷ್ಟು ತಪ್ಪುತ್ತದೆ. ಇದನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರೆಂದು ಭಾವಿಸುತ್ತೇನೆ.

Sri B. M. PATIL.—Sir, I am unable to accept the amendment.

Mr. SPEAKER.—The question is :

That the following proviso shall be substituted for the existing proviso to the proposed sub-section (2) of section 99 :

Provided that the limits of villages included after 1st day of November 1956 in the limits of City of Bangalore Municipal Corporation, the property tax shall be levied not more than five per cent of the annual value of the buildings and lands."

The amendment was negatived.

Mr. SPEAKER.—The question is :

"That clause 6 do stand part of the Bill".

The motion was adopted.

Clause 6 was added to the Bill.

CLAUSE 7 to 9

Mr. SPEAKER.—The question is :

"That Clause 7 do stand part of the Bill."

There is an amendment to Clause 7 by Sri T. R. Shamanna.

Sri T. R. SHAMANNA.—I have conceded to withdraw the amendment. I am not pressing for any of my amendments.

Mr. SPEAKER.—The question is :

"That Clauses 7 to 9, both inclusive, do stand part of the Bill."

The motion was adopted.

Clauses 7 to 9, both inclusive, were added to the Bill.

CLAUSES 10 to 19.

Sri M. S. KRISHNAN.—Sir, the Hon. Mimister while replying the debate stated that he will not press for some of these clauses. withdraw my amendments.

Mr. SPEAKER.—They have got to be put to vote formally a then voted down.

Mr. SPEAKER.—The question is :

"That Clauses 10 to 19, both inclusive, do stand part of the Bill."

The motion was negatived.

Clauses 10 to 19, both inclusive, were deleted from the Bill.

CLAUSE 20.

Mr. SPEAKER.—The question is :

"That Clause 20 do stand part of the Bill.

The motion was adopted.

Clause 20 was added to the Bill.

CLAUSE 21.

Mr. SPEAKER.—Clause 21 is for negative vote. The question is :

"That Clause 21 do stand part of the Bill."

The motion was negatived.

Clause 21 was deleted from the Bill.

CLAUSE 22.

Mr. SPEAKER.—The question is :

"That Clause 22 do stand part of the Bill."

The motion was adopted.

Clause 22 was added to the Bill.

CLAUSES 23 to 24

Sri M. NAGAPPA.—Sir, I am not moving my amendment.

Mr. SPEAKER.—The question is :

"That Clauses 23 to 25, both inclusive, do stand part of the Bill.

The motion was adopted.

Clauses 23 to 25, both inclusive, were added to the Bill.

CLAUSE 1. Etc.,

Mr. SPEAKER.—The question is :

"That Clause 1, long title and the Enacting formulae do stand part of the Bill."

The motion was adopted.

Clause 1, long title and the Enacting formulae, were added to the Bill.

Motion To Pass

Sri B. M. PATIL (Minister of State for Municipal Administration)—. Sir, I beg to move :

"That the City of Bangalore Municipal Corporation (Amendment) Bill, 1970, as amended, be passed."

Mr. SPEAKER.—The question is :

"That the City of Bangalore Municipal Corporation (Amendment) Bill, 1970, as amended, be passed."

The motion was adopted.

Sri T. R. SHAMANNA.—Sir, please permit me to thank the Hon. Minister for acceding at least to some of our requests.

Mr. SPEAKER.—As per Agenda there is an half-an-hour discussion in the name of Sri B. P. Gangadhar, but unfortunately he is not present.

HON. MEMBERS.—It may be taken up tomorrow.

Mr. SPEAKER.—We shall take it up tomorrow or some other day. Now The House will rise and meet again tomorrow at 1-00 P.M.

The House adjourned at Thirty Minutes past Six of the Clock to meet again at One of the Clock on Thursday, the 24th September 1970.

WD 15483—GPB—550—9-12-70